# ಪ್ರಾಥಮಿಕ ತರಗತಿಗಳಲ್ಲಿ ಸಾಹಿತ್ಯವನ್ನು ವ್ಯಾಖ್ಯಾನಿಸುವುದು ಮತ್ತು ಪ್ರತಿಕ್ರಿಯಿಸುವುದು: ಶಿಕ್ಷಕರ ಸಂಶೋಧನೆ[1]

(19)

2019

ಪ್ರಾಥಮಿಕ ತರಗತಿಗಳಲ್ಲಿ ಸಾಹಿತ್ಯವನ್ನು ವ್ಯಾಖ್ಯಾನಿಸುವುದು ಮತ್ತು ಪ್ರತಿಕ್ರಿಯಿಸುವುದು: ಶಿಕ್ಷಕರ ಸಂಶೋಧನೆ

[1] ಇಲ್ಲಿ ಪ್ರಸ್ತುತಪಡಿಸಿದ ಮಾತುಕತೆ ಮತ್ತು ಬರವಣಿಗೆಯ ಎಲ್ಲಾ ಉದಾಹರಣೆಗಳು ಪ್ರಮಾಣಿತವಲ್ಲದ ಬಂಗಾಳಿಯಲ್ಲಿ ಸಂಭವಿಸಿದವು ಮತ್ತು ಅದನ್ನು ಇಂಗ್ಲಿಷ್‌ಗೆ ಅನುವಾದಿಸಲಾಗಿದೆ

ಪಶ್ಚಿಮ ಬಂಗಾಳದ ಒಂದು ಸಣ್ಣ ಹಳ್ಳಿಯಲ್ಲಿ ನಾಲ್ಕನೇ ತರಗತಿಯಲ್ಲಿ, ಒಬ್ಬ ಶಿಕ್ಷಕರು ಥೈಲಾ ಗಾದಿ ಎಂಬ ಕಥೆಯನ್ನು ಗಟ್ಟಿಯಾಗಿ ಓದು\ತ್ತಾರೆ , (ಬಿಭೂತಿ ಭೂಷಣ್ ಬಂಡೋಪಾಧ್ಯಾಯ, ಶ್ರೇಷ್ಠೋ ಕಿಶೋರ್ರ್ ಓಮ್ನಿಬಸ್ (1995), ಕಾಮಿನಿ ಪ್ರಕಾಶಲೆ), ಅದು ಇಬ್ಬರು ಆತ್ಮೀಯ ಸ್ನೇಹಿತರ ಕಥೆ. ಕಿರಿಯವನ ಹೆಸರು, ನೂರು, ಅವನ ಬಳಿ ಒಂದು ಮರದ ಬಂಡಿ ಇತ್ತು. ಅವನು ಅದನ್ನು ಹಳ್ಳಿಯ ಹುಡುಗರಿಗೆ, ಸವಾರಿ ಮಾಡುವುದಕ್ಕೆ ಕೊಟ್ಟು ಆನಂದಿಸುತಿದ್ದ. ವಿಶೇಷವಾಗಿ ಅವನ ಆತ್ಮೀಯ ಗೆಳೆಯ ಟುನಿ ಡಾ ಗೆ., ಒಮ್ಮೆ ಹಳ್ಳಿಯ ಇತರ ಹುಡುಗರು ನೂರುನನ್ನು ರೇಗಿಸಿದಾಗ ಮತ್ತು ಅವನ ಬಂಡಿಯನ್ನು ಮುರಿದಾಗ ಟುನಿ ಅವನ ಪರವಾಗಿ ನಿಲ್ಲುವುದಿಲ್ಲ. ಇದರಿಂದಾಗಿ ಅವರಿಬ್ಬರ ಇಬ್ಬರ ನಡುವೆ ಎಂದೂ ಪರಿಹರಿಸಲಾಗದಷ್ಟು ವೈಮನಸ್ಯ ಸೃಷ್ಟಿಯಾಗುತ್ತದೆ. ಕಥೆಯನ್ನು ಗಟ್ಟಿಯಾಗಿ ಓದುವ ಸಮಯದಲ್ಲಿ ನಡೆದ ಚರ್ಚೆಯ ತುಣುಕು ಇಲ್ಲಿದೆ.

ಶ್ರೇಯಾ: ಈಗ ನೂರು ಎಲ್ಲರನ್ನೂ *ಬಂಡಿಯಲ್ಲಿ ಸುತ್ತಿಸಿದ್ದಾನೆ. ಈಗ* ಸುತ್ತಲೂ ಕರೆದಿದ್ದಾನೆ ಮತ್ತು ಅವನು ಬಂಡಿಯಲ್ಲಿ ಕುಳಿತುಕೊ*ಂಡು* ಯಾರಾದರೂ *ತನ್ನನ್ನು* ಎಳೆಯಬೇಕೆಂದು ವಿನಂತಿಸುತ್ತಿದ್ದಾನೆ, *ಈಗ ಏನಾಗಬಹುದು?*

ನಿಹಾರ್ *1:* ನೂರು *ಕುಳಿತ ಬಂಡಿಯನ್ನು* ಎಳೆಯಲು ಯಾರೂ ಬಯಸುವುದಿಲ್ಲ..

ಶ್ರೇಯಾ: ಏಕೆ?

ಫರ್ಕಾನ್: ಏಕೆಂದರೆ ಅವನು ಚಿಕ್ಕವನು.

ಶ್ರೇಯಾ: ಅಮಿನಾ, ನಿನ್ನ ಅಭಿಪ್ರಾಯವೇನು?

ಅಮಿನಾ: ಟುನಿ ನೂರನ ಬಂಡಿಯನ್ನು ಎಳೆಯುತ್ತಾನೆ .

ಪ್ರದೀಪ್: ಇಲ್ಲ, ಟುನಿ ಬಂಡಿಯನ್ನು ಎಳೆಯುವುದಿಲ್ಲ. *ಹಾಗೆ ಮಾಡಿ*ದರೆ ಅವನ ಸ್ನೇಹಿತರು ಅವನನ್ನು ಕೀಟಲೆ ಮಾಡುತ್ತಾರೆ.

ಶ್ರೇಯಾ: ನಿಮ್ಮಲ್ಲಿ ಎಷ್ಟು ಮಂದಿ ಅಮಿನಾಳ ಉತ್ತರವನ್ನು ಒಪ್ಪುತ್ತೀರಿ?

(ಕೆಲವು ಮಕ್ಕಳು ಕೈ ಎತ್ತುತ್ತಾರೆ.)

ಶ್ರೇಯಾ: ಟುನಿಯ ಜಾಗದಲ್ಲಿ ನೀವು ಇದ್ದಿದ್ದರೆ ಏನು ಮಾಡುತ್ತಿದ್ದಿರಿ ? (ಹೆಚ್ಚು ಅಥವಾ ಕಡಿಮೆ ಸರ್ವಾನುಮತದಿಂದ): ಬಂಡಿಯನ್ನು ಎಳೆಯುತ್ತಿದ್ದೆವು

ಶ್ರೇಯಾ: ಈಗ ಈ ಇತರ ಹುಡುಗರು ಇಟ್ಟಿಗೆಯನ್ನು ಎಸೆದಿದ್ದಾರೆ ಮತ್ತು ನೂರು ಗಾಡಿ ಮುರಿದುಹೋಗಿದೆ, ಟುನಿ ಏನು ಮಾಡುತ್ತಾರೆಂದು ನೀವು ಭಾವಿಸುತ್ತೀರಿ?

ಅಸಿಮ್: ಟುನಿ ತನ್ನ ಸ್ನೇಹಿತರನ್ನು ಗದರಿಸುತ್ತಾನೆ.

ಇನಾಯತ್: ಟುನಿ ಗೆ ನೂರಿನ ಬಗ್ಗೆ ಕೆಟ್ಟ ಭಾವನೆ ಇದೆ, ಆದರೆ ಅವನ ಸ್ನೇಹಿತರ ಕಾರಣದಿಂದಾಗಿ ಏನನ್ನೂ ಮಾಡಲು ಸಾಧ್ಯವಿಲ್ಲ.

ಫರ್ದಸ್: ಅವರು ತಮ್ಮ ಬಂಡಿಯನ್ನು ಮುರಿದ ಕಾರಣ ನೂರು ದುಃಖಿತನಾಗಿದ್ದಾನೆ .

ಶ್ರೇಯಾ: ಟುನಿ ಏನು ಮಾಡುತ್ತಾನೆಂದು ನೀವು ಭಾವಿಸುತ್ತೀರಿ?

,


ಅಸಿಮ್: ಟುನಿ ನೂರಿನನ್ನು ಕ್ಷಮಿಸು ಎಂದು ಕೇಳುತ್ತಾನೆ
(ತರಗತಿ ಚರ್ಚೆ, ನವೆಂಬರ್ 21, 2018)[2]

. ಆರಂಭಿಕ ಹಂತದ ಭಾಷೆಯ ತರಗತಿಗಳಲ್ಲಿ, ಶಿಕ್ಷಕರು ಮಕ್ಕಳಿಗೆ ಬರೆಹಗಳನ್ನು ಓದಲು ಮತ್ತು ಪದಗಳನ್ನು ಸರಿಯಾಗಿ ಉಚ್ಚರಿಸಲು ಮತ್ತು ಕಲಿಸಲು ಪ್ರಯತ್ನಿಸುತ್ತಾರೆ. ಎಲ್ಲೋ ಅಪರೂಪಕ್ಕೆ ಉತ್ತಮ ಸಾಹಿತ್ಯವನ್ನು ಮಕ್ಕಳಿಗೆ ಪರಿಚಯಿಸುತ್ತಾರೆ. ತರಗತಿಯಲ್ಲಿ ಸಾಹಿತ್ಯವನ್ನು ಬಳಸಿದಾಗಲೂ, ಶಿಕ್ಷಕರು ಕಥೆಯನ್ನು ಮಾತ್ರ ಓದುತ್ತಾರೆ , ನಂತರ ಮಕ್ಕಳಿಗೆ ಸರಳವಾದ ಗ್ರಹಿಕೆಯ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಮೇಲೆ ಪ್ರಸ್ತುತಪಡಿಸಿದ ರೀತಿಯ ಸಂವಹನಗಳನ್ನು ನಾವು ಹೆಚ್ಚಾಗಿ ನೋಡುವುದಿಲ್ಲ. ಇದರಲ್ಲಿ, ಶಿಕ್ಷಕರ ಸಂಶೋಧನಾ ಯೋಜನೆಯ ಕೆಲವು ಕಲಿಕೆಗಳನ್ನು ಹಂಚಿಕೊಳ್ಳಲು ನಾವು ಬಯಸುತ್ತೇವೆ, ಅದು ಮಕ್ಕಳ ಸಾಹಿತ್ಯಕ್ಕೆ ಆಳವಾಗಿ ಮತ್ತು ಅರ್ಥಪೂರ್ಣ ರೀತಿಯಲ್ಲಿ ಪ್ರತಿಕ್ರಿಯಿಸಲು ಸಹಾಯ ಮಾಡುತ್ತದೆ.

ಚಿಕ್ಕ ಮಕ್ಕಳಿಗೆ ತರಗತಿಗಳಲ್ಲಿ ಸಾಹಿತ್ಯವನ್ನು ಪರಿಚಯಿಸುವುದೇಕೆ?

ಅನೇಕ ಭಾರತೀಯ ಶಾಲೆಗಳಲ್ಲಿ, ನಾವು ದೊಡ್ಡ ತರಗತಿಯಲ್ಲಿ ಓದುವ ಮಕ್ಕಳಿಗೆ ಸಾಹಿತ್ಯ ಸೂಕ್ತವೆಂದು ಭಾವಿಸುತ್ತೇವೆ; ಆರಂಭಿಕ ತರಗತಿಯ ಮಕ್ಕಳಲ್ಲಿ, ನಾವು ಬರವಣಿಗೆ ಕಲಿಕೆ, ಪ್ಯಾಸೇಜು ಗಳನ್ನು ಅಥವಾ ಕವಿತೆಗಳನ್ನು ಓದುವುದು ಇತ್ಯಾದಿಗಳತ್ತ, ಸರಳ ಗ್ರಹಿಕೆಯ ಪ್ರಶ್ನೆಗಳತ್ತ ಗಮನ ಹರಿಸುತ್ತೇವೆ. ಶ್ರೀಮಂತವಾದ, ಅತ್ಯುತ್ತಮವಾದ ಸಾಹಿತ್ಯವನ್ನು ಪ್ರಾಥಮಿಕ ಶಾಲಾ ತರಗತಿಗಳಿಗೆ ಪರಿಚಯಿಸುವ ಮತ್ತು ಅದರೊಂದಿಗೆ ಮಕ್ಕಳನ್ನು ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳುವ ಅವಶ್ಯಕತೆಯಿದೆ. ಹಾಗೆ ಮಾಡಲು ನಾವು ಕೆಲವು ಪ್ರಮುಖ ಕಾರಣಗಳನ್ನು ಇಲ್ಲಿ ಪಟ್ಟಿ ಮಾಡಿದ್ದೇವೆ.

ನಿರೂಪಣೆಯನ್ನು ಬೆಳೆಸಿಕೊಳ್ಳಲು ಸಹಕರಿಸುವುದು

ಚಿಕ್ಕ ಮಕ್ಕಳ ಸಂತೋಷಕ್ಕಾಗಿ ಕಥೆಗಳನ್ನು ಓದಬೇಕು ಅಥವಾ ಹೇಳಬೇಕು ಅಥವಾ ಅವರ ಕಲ್ಪನೆಗೆ ಸಹಾಯ ಮಾಡಬೇಕು ಎಂದು ನಮ್ಮಲ್ಲಿ ಅನೇಕರು ಭಾವಿಸುತ್ತೇವೆ. ಇವುಗಳು ಉತ್ತಮ ಕಾರಣಗಳಾಗಿದ್ದರೂ, ಮಕ್ಕಳನ್ನು ಸಾಹಿತ್ಯದೊಂದಿಗೆ, ಕಥೆಗಳೊಂದಿಗೆ ಹೆಚ್ಚು ನಿರ್ದಿಷ್ಟವಾಗಿ ತೊಡಗಿಸಿಕೊಳ್ಳುವುದು ಬಹಳ ಮುಖ್ಯ ಎಂದು ಗಾರ್ಡನ್ ವೆಲ್ಸ್ (2009) ಸೂಚಿಸುತ್ತಾರೆ . ವೆಲ್ಸ್ ಪ್ರಕಾರ, ತುಂಬಾ ಚಿಕ್ಕ ಮಕ್ಕಳು ಸಹ ಕಥೆ ಕಟ್ಟುವ ಮೂಲಕ ತಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತಾರೆ. ಉದಾಹರಣೆಗೆ, ಒಂದು ಚಿಕ್ಕ ಮಗು ಚೆಂಡನ್ನು ಎಸೆದಿರಬಹುದು, ಅದು ಒಂದು ನೀರಿನ ಜಗ್‌ಗೆ ಬಡಿದಿರುತ್ತದೆ. ಅವನ ತಾಯಿ ಅವನನ್ನು ಗದರಿಸಿರಬಹುದು, ಮತ್ತು ಅವನು ಅತ್ತಿರಬಹುದು. ನಂತರ, ಅವಳು ಅವನನ್ನು ಎತ್ತಿಕೊಂಡು ಸಮಾಧಾನಪಡಿಸಿರಬಹುದು. ಇವುಗಳು ವಿಭಿನ್ನ ಘಟನೆಗಳಾಗಿವೆ, ಇವುಗಳನ್ನು ಸುಸಂಬದ್ಧವಾದ ಕಥೆಯನ್ನು ಮಾಡಲು ಅನುಕ್ರಮವಾಗಿ ಮತ್ತು ಒಟ್ಟಿಗೆ ಜೋಡಿಸಬೇಕಾಗುತ್ತದೆ.

ಚಿಕ್ಕ ಮಕ್ಕಳು ತಮ್ಮ ಜೀವನದಲ್ಲಿ ನಡೆದ ವಿಭಿನ್ನ ಘಟನೆಗಳನ್ನು ಸೂತ್ರಬದ್ಧವಾಗಿ ಸಂಯೋಜಿಸಿ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ವೆಲ್ಸ್ ಇದನ್ನು ಕಥೆ ಎಂದು ಉಲ್ಲೇಖಿಸುತ್ತಾರೆ, ಇದನ್ನು ಅವರು ಮನಸ್ಸಿನ ಪ್ರಾಥಮಿಕ ಕಾರ್ಯವೆಂದು ನೋಡುತ್ತಾರೆ . ನಾವು ಮಕ್ಕಳಿಗೆ ಕಥೆಗಳನ್ನು ನಿರೂಪಿಸುವಾಗ ಮತ್ತು ಕಥೆ ಹೇಳುವಿಕೆಯೊಂದಿಗೆ ತೊಡಗಿಸಿಕೊಂಡಾಗ, ನಾವು ಈ ಪ್ರಾಥಮಿಕ ಅರಿವಿನ ಕಾರ್ಯಕ್ಕೆ ಸಹಾಯ ಮಾಡುತ್ತೇವೆ, ಅದು ಅಂತಿಮವಾಗಿ ಮಗುವಿಗೆ ಆನಂದವನ್ನು ನೀಡುವುದರ ಜೊತೆಗೆ ವಿವಿಧ ರೀತಿಯ ಕಲಿಕೆಗೂ ಸಹಾಯವಾಗುತ್ತದೆ.

[2] ಎಲ್ಲಾ ಮಕ್ಕಳ ಗುರುತನ್ನು ಗೌಪ್ಯವಾಗಿಡಲು, ಅವರ ಹೆಸರನ್ನು ಅವರ ಗುರುತನ್ನು ಬದಲಾಯಿಸಲಾಗಿದೆ.

# ನಮ್ಮನ್ನು ಮತ್ತು ನಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳುವುದು

ಸಾಹಿತ್ಯವು ಮಕ್ಕಳಿಗೆ ಎರಡು ರೀತಿಯ ಅವಕಾಶಗಳನ್ನು ಒದಗಿಸುತ್ತದೆ. ಮೊದಲಿಗೆ, ಪಠ್ಯಗಳನ್ನು ಅವರ ಜೀವನದೊಂದಿಗೆ ಹೋಲಿಸಿಕೊಳ್ಳಲು ಮತ್ತು ಅವುಗಳ ಕುರಿತು ಪರ್ಯಾಲೋಚಿಸಲು ಅವಕಾಶ ನೀಡುತ್ತದೆ. ಅವರ ಜೀವನದ ಕೆಲವು ಅಂಶಗಳ ಬಗ್ಗೆ ಯೋಚಿಸದಿರಬಹುದು, ಅದರತ್ತ ಗಮನ ಹರಿಸದಿರಬಹುದು ಅಥವಾ ಅವರಿಗೆ ಅದು ಅರ್ಥವಾಗದೇ ಇರಬಹುದು. ಅಂತಹ ಅಂಶಗಳ ಕುರಿತು ಯೋಚಿಸುವಂತೆ ಮಾಡುತ್ತದೆ. ಉದಾಹರಣೆಗೆ, ದಿ ಬಾಯ್ ಹೂ ಅಸ್ಕೆಡ್ ವೈ (ಏಕೆ ಎಂದು ಕೇಳಿದ ಬಾಲಕ) (ಸೌಮ್ಯಾ ರಾಜಂದ್ರನ್, ತುಲಿಕಾ, 2015) ಪುಸ್ತಕವನ್ನು ಒದಿದ ನಂತರ, ಮಗುವಿಗೆ ತನ್ನದೇ ಸಮುದಾಯದ ಅಥವಾ ಶಾಲೆಯಲ್ಲಿನ ಜಾತಿ ಭೇದಗಳ ಬಗ್ಗೆ ಹೆಚ್ಚು ಅರಿವು ಮೂಡಬಹುದು. ಆದ್ದರಿಂದ ಮಗುವಿನ ಪರಿಸರದೊಂದಿಗೆ ಸಂಪರ್ಕ ಸಾಧಿಸುವ ಪಠ್ಯಗಳು ಮಗುವಿಗೆ ಆ ಕೃತಿಯ ಒಳನೋಟಗಳನ್ನು ಕುರಿತು ಆಲೋಚಿಸಿ ಅದನ್ನು ಪರಿಚಿತವಾಗಿಸಿಕೊಳ್ಳಲು ಮತ್ತು ಅದರಿಂದ ಲಾಭ ಪಡೆಯಲು ಸಹಾಯ ಮಾಡುತ್ತದೆ.

ಒಂದು ಸಾಹಿತ್ಯಿಕ ಭಾಗದೊಂದಿಗೆ ತೊಡಗಿಸಿಕೊಳ್ಳುವಾಗ, ಮಕ್ಕಳು ಪಠ್ಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳು, ಆಲೋಚನೆಗಳು, ಐಡಿಯಾಗಳು, ಭಾವನೆಗಳು, ಮಾನವ ಸಂಬಂಧಗಳ ತಿಳುವಳಿಕೆ ಮತ್ತು ಮುಂತಾದವುಗಳನ್ನು ಮುನ್ನೆಲೆಗೆ ತಂದು ಪರಿಭಾವಿಸಲು ತರಲು ಪ್ರೋತ್ಸಾಹಿಸಬೇಕು (ರೋಸೆನ್‌ಬ್ಲಾಟ್, 1995). ಈ ರೀತಿಯಾಗಿ, ಅವರು ಕೃತಿಯನ್ನು ಪುನಃ ಜೀವಂತಗೊಳಿಸಬಹುದು ಮತ್ತು ತಾವು ಒದಿದ ಕೃತಿಯ ಕುರಿತು ಯೋಚಿಸಲು ಮತ್ತು ಭಾವಿಸಲು ಪ್ರಾರಂಭಿಸಬಹುದು. ಸೃಜನಶೀಲ ಓದುವ ಅನುಭವದ ಸಮಯದಲ್ಲಿ, ವಿಭಿನ್ನ ರೀತಿಯ ಪ್ರತಿಕ್ರಿಯೆಗಳು ಏಕಕಾಲದಲ್ಲಿ ಅಥವಾ ಕಾಲಾನಂತರದಲ್ಲಿ ಭಾವನಾತ್ಮಕ ಪ್ರತಿಕ್ರಿಯೆಗಳು, ಆಲೋಚನೆಗಳ ಸೂತ್ರೀಕರಣ, ಪಾತ್ರಗಳ ವರ್ತನೆಗಳ ಬಗ್ಗೆ ಅಭಿಪ್ರಾಯಗಳು ಅಥವಾ ಕೃತಿ ತಿಳಿಸಿದ ಸಂದರ್ಭಗಳಿಂದ ಹೊರಹೊಮ್ಮಬಹುದು ಎಂದು ರೋಸೆನ್‌ಬ್ಲಾಟ್ ಬರೆಯುತ್ತಾರೆ -. ಮಕ್ಕಳು ತಾವು ಓದಿದ ಪಠ್ಯಗಳಿಗೆ ಮರಳಲು ಸಾಧ್ಯವಾಗಬೇಕಾಗುತ್ತದೆ.

ಮಕ್ಕಳು ತಮ್ಮ ಆರಂಭಿಕ ಪ್ರತಿಕ್ರಿಯೆಗಳನ್ನು ಪರ್ಯಾಲೋಚಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಪಠ್ಯವನ್ನು ಆಳವಾಗಿ ಮತ್ತು ಉತ್ತಮವಾಗಿ ವ್ಯಾಖ್ಯಾನಿಸಿಕೊಳ್ಳಲು ವಯಸ್ಕರು ಸಹಾಯ ಮಾಡಬೇಕಾಗುತ್ತದೆ.

ಎರಡನೆಯದಾಗಿ, ಪಠ್ಯಗಳು , ಮಕ್ಕಳ ತತ್ ತಕ್ಷಣದ ಅನುಭವಗಳು ಅಥವಾ ಕಾಳಜಿಗಳನ್ನು ಮೀರಿದ ಹೊಸ ಪ್ರಪಂಚಗಳನ್ನು ಅನಾವರಣ ಮಾಡಬಹುದು. ಉದಾಹರಣೆಗೆ, ನಗರ ಭಾಗದ ಭಾರತದ ಮಗುವಿಗೆ ಗ್ರಾಮೀಣ ಪ್ರದೇಶಗಳಲ್ಲಿನ ಜೀವನದ ಬಗ್ಗೆ ಅಥವಾ ಗ್ರಾಮೀಣ ಪ್ರದೇಶದ ಮಗುವಿಗೆ ನಗರ ಭಾಗದ ಜೀವನದ ಬಗ್ಗೆ ಅರಿವು ಮೂಡಿಸಬಹುದು. ಪಠ್ಯಗಳು, ಮಕ್ಕಳು ತಾವು ವಾಸಿಸುವ ಪ್ರಪಂಚದ ಬಗ್ಗೆ ತಮ್ಮ ತಿಳುವಳಿಕೆಯನ್ನು ವಿಸ್ತರಿಸಲು ಮತ್ತು ಆಳವಾಗಿಸಲು, ಸಹಾಯ ಮಾಡುತ್ತವೆ.

## ಸಾಹಿತ್ಯಿಕ ತಿಳುವಳಿಕೆಯನ್ನು ಬೆಳೆಸುವುದು

ಚಿಕ್ಕ ಮಕ್ಕಳು ಸಹ ಸಾಹಿತ್ಯದ ಬಗ್ಗೆ ಕಲಿಯಬಹುದೇ? ಚಿಕ್ಕ ಮಕ್ಕಳು ಸಹ ನಿರೂಪಣೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದರ ಕುರಿತ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಬಹುದು ಎಂದು ನಮಗೆ ತಿಳಿದಿದೆ. ಅಂತಹ ನಿರೂಪಣೆಗಳಿಗೆಪ್ರಾರಂಭ, ಮಧ್ಯ ಮತ್ತು ಅಂತ್ಯವಿದೆ, ಮತ್ತು ಘಟನೆಗಳಿಗೆ ಒಂದು ಅನುಕ್ರಮವಿದೆ ಎಂದು ಅವರಿಗೆ ತಿಳಿದಿರುತ್ತದೆ. ನಂತರ, ಕಥೆಗಳಿಗೆ ಕಥಾವಸ್ತುಗಳು, ಪಾತ್ರಗಳು, ಸೆಟ್ಟಿಂಗ್‌ಗಳು ಮತ್ತು ಮುಂತಾದವುಗಳಿರುತ್ತವೆ ಎಂದು ಅವರು ಗಮನಿಸಲು ಪ್ರಾರಂಭಿಸುತ್ತಾರೆ. ಕವನಗಳು, ಸೃಜನಶೀಲ, ಸೃಜನೇತರ, ಮುಂತಾದ ಹಲವು ಬಗೆಯ ಸಾಹಿತ್ಯಗಳಿವೆ ಎಂದು ಅವರು ಅರ್ಥಮಾಡಿಕೊಳ್ಳಬಹುದು; ಮತ್ತು ಈ ಒಂದೊಂದು ಬಗೆಗಳಲ್ಲೂ ಪುನಃ ಆತ್ಮಚರಿತ್ರೆಗಳು, ಐತಿಹಾಸಿಕ ಕೃತಿಗಳು, ಮಾಹಿತಿ ತುಣುಕುಗಳು, ಚಿತ್ರ ಪುಸ್ತಕಗಳು, ವಾಸ್ತವಿಕ ಕಾದಂಬರಿ, ಫ್ಯಾಂಟಸಿ, ಅಸಂಬದ್ಧ ಪ್ರಾಸ ಮತ್ತು ಖಾಲಿ ಪದ್ಯದಂತಹ ಅನೇಕ ಉಪ-ವರ್ಗಗಳು

ಇರುತ್ತವೆ ಎಂದು ಅವರು ತಿಳಿಯಬಹುದು. ವಯಸ್ಕರ ಸಹಾಯದಿಂದ ಅವರು ಈ ಪ್ರತಿಯೊಂದು ಬಗೆಗಳನ್ನೂ, ಉಪವಿಭಾಗಗಳನ್ನೂ ಕಾಲಾನಂತರದಲ್ಲಿ ತಾವು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲೆವು ಎಂದು ಅವರು ಅರಿಯಬಲ್ಲವರಾಗುತ್ತಾರೆ. ವಿಭಿನ್ನ ಲೇಖಕರು ವಿಭಿನ್ನ ಶೈಲಿಯ ಬರವಣಿಗೆಯನ್ನು ಹೊಂದಿದ್ದಾರೆಂದು ಅವರು ಅರ್ಥಮಾಡಿಕೊಳ್ಳುತ್ತಾರೆ; ಅದೇ ರೀತಿ ವಿಭಿನ್ನ ಚಿತ್ರಕಾರರು ವಿಭಿನ್ನ ಶೈಲಿಗಳಲ್ಲಿ ಚಿತ್ರರಚನೆ ಮಾಡುತ್ತಾರೆ. ಬರಹಗಾರರು ಚಿತ್ರಕಾರರರು ಸಂವಹಿಸಲು ಬಳಸುವ ಶೈಲಿ ತಂತ್ರಗಾರಿಕೆಗಳನ್ನು ಗಮನಿಸುತ್ತಾರೆ. ಪ್ರೋತ್ಸಾಹ ಸಿಕ್ಕಲ್ಲಿ ತಾವೂ ತಮ್ಮ ಚಿತ್ರ-ಬರೆಹಗಳಲ್ಲಿ ಅವನ್ನು ಬಳಸುವ ಪ್ರಯತ್ನ ಮಾಡುತ್ತಾರೆ.

**ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರ ಸಂಶೋಧನೆ**

ಈ ಟಿಪ್ಪಣಿಯ ಸಹ-ಬರಹಗಾರ್ತಿಯಾದ ಶ್ರೇಯ ರಕ್ಷಿತ್ ಅವರು ಪ್ರಾಥಮಿಕ ತರಗತಿ ಮಕ್ಕಳ ಸಾಹಿತ್ಯವನ್ನು ಬಳಸುವ ಸಾಮರ್ಥ್ಯವನ್ನು ಪರೀಕ್ಷಿಸುವ ಆಸಕ್ತಿ ಹೊಂದಿದ್ದರು. ಮತ್ತೊಬ್ಬ ಸಹ-ಬರಹಗಾರಗಾರ್ತಿ ಶೈಲಜಾ ಮೆನನ್ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದ ಇವರು, ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶದ ವಿಕ್ರಮಶಿಲಾ ಶಾಲೆಯಲ್ಲಿ ನಾಲ್ಕನೇ ತರಗತಿಯ 20 ವಿದ್ಯಾರ್ಥಿಗಳಿಗೆ ಆರು ವಾರಗಳ ಪಠ್ಯಕ್ರಮವನ್ನು ಯೋಜಿಸಿ ಜಾರಿಗೆ ತಂದರು.

ಆ ಶಾಲೆಯ ಬೋಧನಾ ಮಾಧ್ಯಮ ಬಂಗಾಳಿಯಾಗಿತ್ತು . ಸಮುದಾಯದಲ್ಲಿ ಮಾತನಾಡುವ ಭಾಷೆ ಬಂಗಾಳಿ ಆಗಿದ್ದರೂ ಸಹ , ಅದು ಪಠ್ಯಪುಸ್ತಕಕ್ಕಿಂತ ಭಿನ್ನವಾಗಿತ್ತು. ವಿಕ್ರಮಶಿಲಾ ಎಜುಕೇಶನ್ ರಿಸೋರ್ಸ್ ಸೊಸೈಟಿಯ ಪ್ರಯತ್ನದಿಂದಾಗಿ, ಮಕ್ಕಳು ಮೊದಲೇ ಸಾಹಿತ್ಯದೊಂದಿಗೆ ತೊಡಗಿಸಿಕೊಂಡಿದ್ದರು ಮತ್ತು ಬಂಗಾಳಿಯಲ್ಲಿ ಸ್ವಲ್ಪ ಓದುವ ಮತ್ತು ಬರೆಯುವ ಪ್ರಾವೀಣ್ಯವನ್ನು ಹೊಂದಿದ್ದರು, ಬಂಗಾಳೀ ಓದು ಬರೆಹದಲ್ಲೂ ಅವರಿಗೆ ಪರಿಶ್ರಮವಿತ್ತು. ಬರವಣಿಗೆಯಲ್ಲಿ ಅವರ ಪ್ರಾವೀಣ್ಯ ವೈವಿಧ್ಯಮಯವಾಗಿತ್ತು – ಎರಡು ಅಥವಾ ಮೂರು ವಿದ್ಯಾರ್ಥಿಗಳು ವಾಕ್ಯಗಳನ್ನು ಬರೆಯಲು ಹೆಣಗಾಡಿದರು, ಆದರೆ ಮೂರರಿಂದ ನಾಲ್ಕು ವಿದ್ಯಾರ್ಥಿಗಳು ತುಂಬಾ ನಿರಾಯಾಸವಾಗಿ ಓದುಬರೆಹ ಮಾಡುತ್ತಿದ್ದರು ಮತ್ತು ಬರವಣಿಗೆಯಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಹೊಂದಿದ್ದರು.



*ಚಿತ್ರ 1.* ಶ್ರೇಯಾ ತನ್ನ ಮಕ್ಕಳ ಗುಂಪಿನೊಂದಿಗೆ. **ಚಿತ್ರಕೃಪೆ**: ಶ್ರೇಯ ರಕ್ಷಿತ್.

**ಶಿಕ್ಷಣ ತತ್ವಗಳು**

ನಾವು ಕೆಲವು ಪ್ರಮುಖ ಶಿಕ್ಷಣ ತತ್ವಗಳನ್ನು ಆಧರಿಸಿ ವಿದ್ಯಾರ್ಥಿಗಳೊಂದಿಗಿನ ನಮ್ಮ ಚಟುವಟಿಕೆಯನ್ನು ವಿನ್ಯಾಸಗೊಳಿಸಿದ್ದೇವೆ, ಅದನ್ನು ಮುಂದೆ ವಿವರಿಸುತ್ತೇವೆ.

**ತತ್ವ 1: ಮಕ್ಕಳಿಗೆ ಸಂದರ್ಭೋಚಿತ ಸಾಹಿತ್ಯ ಪರಿಚಯಿಸುವುದರಿಂದ , ಒಳ್ಳೆಯ ಚರ್ಚೆಗಳನ್ನು ನಡೆಸುವ ಸಾಧ್ಯತೆಗಳಿವೆ.** ಭಾರತೀಯ ತರಗತಿ ಕೋಣೆಗಳಲ್ಲಿನ ನಿರಾಶಾದಾಯಕ ಸ್ಥಿತಿಯನ್ನು ನಾವು ಗಮನಿಸಿದ್ದೇವೆ - ಪಠ್ಯಪುಸ್ತಕಗಳಲ್ಲಿ ಸೇರಿಸಲಾಗಿರುವ ಪಠ್ಯಭಾಗಗಳು ಮತ್ತು ಕವನಗಳು ಮಕ್ಕಳಿಗೆ ಆಸಕ್ತಿದಾಯಕವಾಗಿಲ್ಲ, ಆಕರ್ಷಕವಾಗಿಲ್ಲ. ಈ ಪಠ್ಯಗಳು ಮಕ್ಕಳೊಂದಿಗೆ ಅರ್ಥಪೂರ್ಣ ಸಂಭಾಷಣೆಯನ್ನು ನಡೆಸಬಲ್ಲಷ್ಟು ಸಮೃದ್ಧವಾಗಿಲ್ಲ. ಆದ್ದರಿಂದ, ನಾವು ಶ್ರೇಷ್ಠವಾದ ಪಠ್ಯಗಳನ್ನು ಆರಿಸಬೇಕು ಎಂದು ನಿರ್ಧರಿಸಿಕೊಂಡೆವು.

ಒಳ್ಳೆಯ ಮಕ್ಕಳ ಸಾಹಿತ್ಯ ಏಕ ಆಯಾಮದ್ದಾಗಿರುವುದಿಲ್ಲ , ಅತಿ ಸರಳವಾಗಿರುವುದಿಲ್ಲ ಅಥವಾ ಕೈವಲ ನೈತಿಕ ಸಾಹಿತ್ಯವಾಗಿರುವುದಿಲ್ಲ;; ಅದು ಬದುಕಿನ ಸಂಕೀರ್ಣತೆಯನ್ನು ಒಳಗೊಂಡಿರುತ್ತದೆ (ಪೊಪೊವಾ, 2015). ಪಠ್ಯಗಳು ಸಾಮಾನ್ಯವಾಗಿ ವಿಭಿನ್ನ ಹಂತಗಳಲ್ಲಿ ತೊಡಗಿಸಿಕೊಳ್ಳುವ ಅರ್ಥವನ್ನು ನೀಡುತ್ತವೆ –ಯಾರೊಬ್ಬರು ಅನ್ವೇಷಿಸಬಹುದಾದ ವ್ಯಾಪಕವಾದ ಥೀಮ್ ಮತ್ತು ಇತರ ಸಬ್-ಥೀಮ್‌ಗಳು ಆಗಿರಬಹುದು. ಮಕ್ಕಳಲ್ಲಿ ಆಸಕ್ತಿಯನ್ನು ಹುಟ್ಟುಹಾಕುವ ಬಹುತೇಕ ಕಥೆಗಳು ರೂಪಕಗಳು ಮತ್ತು ಸಂಕೇತಗಳನ್ನು ಹೊಂದಿರಬಹುದು ಮತ್ತು ಅವಕ್ಕೆ ವ್ಯಾಖ್ಯಾನದ ಅಗತ್ಯವಿರಬಹುದು. ಒಳ್ಳೆಯ ಮಕ್ಕಳ ಸಾಹಿತ್ಯವು ಮಾನವ ಜೀವನದ, ಸಮಾಜದ ಅಥವಾ ಸಂಕೀರ್ಣ ಭಾವನೆಗಳ ಹೋರಾಟಗಳನ್ನು ಪ್ರತಿನಿಧಿಸುವ ವಿಷಯಗಳೊಂದಿಗೆ ಕೂಡಿರುತ್ತದೆ.(ವುಲ್ಫ್, 2004).

**ತತ್ವ 2: ಶಿಕ್ಷಕರ ಗುರಿ ಕೇವಲ ವಿದ್ಯಾರ್ಥಿಗಳಿಗೆ ಪಠ್ಯವನ್ನು ಅರ್ಥಮಾಡಿಸುವುದಾಗಿರದೆ ಅದನ್ನು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸುವುದು ಮತ್ತು ಪ್ರತಿಕ್ರಿಯಿಸುವುದು ಆಗಿರಬೇಕು.** ಭಾರತದ ಪ್ರಾಥಮಿಕ ಶಾಲಾ ತರಗತಿ ಕೋಣೆಗಳಲ್ಲಿನ ಹೆಚ್ಚಿನ ಶಿಕ್ಷಕರು, ನಾವು ಹೇಳಿದಂತೆ, ವಿದ್ಯಾರ್ಥಿಗಳು "ಸರಿಯಾದ" ಉಚ್ಚಾರಣೆಯೊಂದಿಗೆ ಪಠ್ಯಗಳನ್ನು ನಿಖರವಾಗಿ ಓದುತಿದ್ದಾರಾ ಎಂದು ಮಾತ್ರ ಗಮನ ಹರಿಸುತ್ತಾರೆ. ಉತ್ತಮ ಶಿಕ್ಷಕರು ಇದನ್ನು ಮೀರಿ ಮುಂದಕ್ಕೆ ಹೋಗುತ್ತಾರೆ; ಅವರು ಓದಿದ ಪಠ್ಯಗಳನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಾರೆ.



ಚಿತ್ರ 2. ಮಕ್ಕಳಿಗೆ ಪಠ್ಯಗಳನ್ನು ವ್ಯಾಖ್ಯಾನಿಸಲು ಮತ್ತು ಪ್ರತಿಕ್ರಿಯಿಸಲು, ಆ ಮೂಲಕ ಒಂದು ದೃಷ್ಟಿಕೋನ ರೂಪಿಸಿಕೊಳ್ಳಲು ಮತ್ತು ಗಹನವಾದ ಅರ್ಥಗಳನ್ನು ಕಾಣಲು ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ. ಚಿತ್ರಕೃಪೆ: ಶ್ರೇಯ ರಕ್ಷಿತ್.

ನಾವು ವಿದ್ಯಾರ್ಥಿಗಳಿಗೆ ಪರಿಚಯಿಸಿದ ಪಠ್ಯಗಳನ್ನು ಅವರು ಅರ್ಥಮಾಡಿಕೊಳ್ಳಬೇಕೆಂದು ನಾವು ಬಯಸಿದ್ದರೂ, ಅವರ ಪ್ರತಿಕ್ರಿಯೆಗಳು ಗ್ರಹಿಕೆಯನ್ನು ಮೀರಿರಬೇಕು, ಅದನ್ನು ಅವರು ವ್ಯಾಖ್ಯಾನಿಸಬಲ್ಲವರಾಗಬೇಕು ಎಂದು ನಾವು ಬಯಸಿದೆವು. ಇಲ್ಲಿ ವ್ಯಾಖ್ಯಾನವೆಂದರೆ ಒಂದು 'ಸರಿಯುತ್ತರ' ಇರುವುದಿಲ್ಲ. ಒಂದು ಸನ್ನಿವೇಶಕ್ಕೆ ಹಲವು ದೃಷ್ಟಿಕೋನಗಳು ಇರಬಹುದು, ಮತ್ತು ವಿಭಿನ್ನ ಜನರು ಒಂದೇ ಪರಿಸ್ಥಿತಿಯನ್ನು ವಿಭಿನ್ನವಾಗಿ ವ್ಯಾಖ್ಯಾನಿಸಬಹುದು. ಮಕ್ಕಳಿಗೆ ವ್ಯಾಖ್ಯಾನದ ಮೂಲಕ ಪಠ್ಯದೊಂದಿಗೆ ಆಳವಾಗಿ ತೊಡಗಿಸಲು ನಾವು ಉತ್ಸುಕರಾಗಿದ್ದೆವು.

ಇದಲ್ಲದೆ, ಪ್ರತಿಕ್ರಿಯೆಗಾಗಿ ನಾವು ಅನೇಕ ಮಾರ್ಗಗಳನ್ನು ಒದಗಿಸಲು ಬಯಸಿದ್ದೆವು. ಮಕ್ಕಳು ಪಠ್ಯವನ್ನು ತಮ್ಮ ಜೀವನದೊಂದಿಗೆ (ಪಠ್ಯದಿಂದ ಸ್ವಯಂ), ತಾವು ಓದಿದ ಇತರ ಪಠ್ಯಗಳೊಂದಿಗೆ (ಪಠ್ಯದಿಂದ ಪಠ್ಯಕ್ಕೆ) ಅಥವಾ ಹೊರಜಗತ್ತಿನೊಂದಿಗೆ (ಪಠ್ಯದಿಂದ ಜಗತ್ತಿಗೆ) ಸಂಪರ್ಕಿಸುವ ಮೂಲಕ ಮಕ್ಕಳು ಪ್ರತಿಕ್ರಿಯಿಸಬಹುದು. ಅವರು ಅದರ ಅರ್ಥವನ್ನು ವಿಶ್ಲೇಷಿಸಬಹುದು, ಅದರಲ್ಲಿ ಅವರು ಇಷ್ಟಪಟ್ಟ ಅಥವಾ ಇಷ್ಟಪಡದಿರುವ ವಿಷಯಗಳ ಬಗ್ಗೆ ಯೋಚಿಸಬಹುದು ಮತ್ತು ಅದು ಉದ್ದೀಪಿಸುವ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಚರ್ಚಿಸಬಹುದು.

ವಿವಿಧ ವಿಧಾನಗಳ ಮೂಲಕ ಮಕ್ಕಳು ಪ್ರತಿಕ್ರಿಯಿಸಬೇಕೆಂದು ನಾವು ಬಯಸಿದ್ದೆವು. ಮೌಖಿಕ ಪ್ರತಿಕ್ರಿಯೆ, ಅಥವಾ ಚರ್ಚೆ, ಇಲ್ಲಿಯ ಬಹಳ ಮುಖ್ಯವಾದ ವಿಧಾನವಾಗಿದೆ. ಇದಲ್ಲದೆ, ಮಕ್ಕಳು ತಮ್ಮ ಪ್ರತಿಕ್ರಿಯೆಗಳನ್ನು ಬರೆಯಬಹುದು, ಚಿತ್ರಿಸಬಹುದು ಅಥವಾ ಅಭಿನಯಿಸಿ ತೋರಿಸಬಹುದು. ಎಜುಕೇಟರ್ ಅನ್ನಿ ಡೈಸನ್ (1990) ಸಣ್ಣ ಮಕ್ಕಳು ತಮ್ಮ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಮಾತನಾಡುವುದು, ಓದುವುದು, ಬರೆಯುವುದು, ಚಿತ್ರಿಸುವುದು, ನಾಟಕ ಮಾಡುವುದು ಮತ್ತು ಕೇಳುವ ಪ್ರಕ್ರಿಯೆಗಳನ್ನು ಸಂವಾದಾತ್ಮಕವಾಗಿ ಬಳಸಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಆದ್ದರಿಂದ, ಪಠ್ಯಗಳಿಗೆ ಪ್ರತಿಕ್ರಿಯಿಸಲು ಮಕ್ಕಳಿಗೆ ಅನೇಕ ವಿಧಾನಗಳನ್ನು ಬಳಸಲು ಪ್ರೋತ್ಸಾಹಿಸುವುದರಿಂದ ಭಾಷೆಯನ್ನು ಬಳಸುವ ಅವರ ಒಟ್ಟಾರೆ ಸಾಮರ್ಥ್ಯ ಬಲಗೊಳ್ಳುತ್ತದೆ, ಇದು ಅವರಿಗೆ ಅನೇಕ ಅಭಿವ್ಯಕ್ತಿ ವಿಧಾನಗಳನ್ನು ಕೊಡುತ್ತದೆ. ನಮ್ಮ ಚಟುವಟಿಕೆಯಲ್ಲಿ, ಮಕ್ಕಳು ಪಠ್ಯಗಳಿಗೆ ಪ್ರತಿಕ್ರಿಯಿಸುತ್ತಾ ಮಾತನಾಡಿದರು, ಬರವಣಿಗೆ ಮಾಡಿದರು ಮತ್ತು ಚಿತ್ರ ಬಿಡಿಸಿದರು.

**ತತ್ವ 3: ರೀಡ್ ಅಲೌಡ್ ಸಂವಾದಾತ್ಮಕ ಚಟುವಟಿಕೆಗಳು ಮಕ್ಕಳಿಗೆ ಶ್ರೇಷ್ಠ ಪಠ್ಯಗಳನ್ನು ಪರಿಚಯಿಸಲು ಮತ್ತು ಅವರಿಂದ ಪ್ರತಿಕ್ರಿಯೆಗಳನ್ನು ಹೊರತರಲು ಒಂದು ಪ್ರಬಲ ಸಾಧನವಾಗಿದೆ.** ರೀಡ್ ಅಲೌಡ್ ಸಂವಾದಾತ್ಮಕ ಚಟುವಟಿಕೆಗಳೆಂದರೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯವನ್ನು ಗಟ್ಟಿಯಾಗಿ ಓದಿ ಹೇಳುವಾಗ, ಓದುವ ಮುನ್ನ, ಓದುವಾಗ ಮತ್ತು ಓದಿದ ತರುವಾಯ ವಿದ್ಯಾರ್ಥಿಗಳು, ಪಠ್ಯ ಮತ್ತು ತಮ್ಮ ನಡುವಿನ ಸಂವಾದಗಳನ್ನು ಸೃಷ್ಟಿಸಲು ವಿವಿಧ ಮಾರ್ಗಗಳನ್ನು ಎಚ್ಚರಿಕೆಯಿಂದ ಯೋಜಿಸಿದಾಗ ರೀಡ್ ಅಲೌಡ್ ಚಟುವಟಿಕೆ ಸಂಭವಿಸುತ್ತದೆ. (ಬ್ಯಾರೆಂಟೈನ್, 1996).[3] ಶಿಕ್ಷಕರು ಪಠ್ಯವನ್ನು ಓದುತ್ತಿರುವುದರಿಂದ, ನಾವು ವಿದ್ಯಾರ್ಥಿಗಳ ಸ್ವತಂತ್ರ ಓದುವ ಮಟ್ಟಕ್ಕಿಂತ ಹೆಚ್ಚಿನ ಮಟ್ಟದ ಪಠ್ಯಗಳನ್ನು ಆಯ್ಕೆ ಮಾಡಬಹುದು. ಕತೆಯುದ್ದಕ್ಕೂ ಮಕ್ಕಳಿಂದ ಸಂವಾದಗಳನ್ನು ಎಚ್ಚರಿಕೆಯಿಂದ ಆಹ್ವಾನಿಸುವ ಮೂಲಕ, ಸಂದರ್ಭವನ್ನು ಹೊಂದಿಸಲು ಮತ್ತು ಮಕ್ಕಳ ವ್ಯಾಖ್ಯಾನಗಳನ್ನು ಮತ್ತು ಪಠ್ಯಗಳಿಗೆ ಪ್ರತಿಕ್ರಿಯೆಗಳನ್ನು ಒಳಗೊಂಡಿರುವ ಅರ್ಥಗಳ ಸಹ-ನಿರ್ಮಾಣವನ್ನು ಮಕ್ಕಳಿಂದ ಮಾಡಿಸಲು ಸಾಧ್ಯವಾಗುತ್ತದೆ.

ಗಟ್ಟಿಯಾಗಿ ಸಂವಾದಾತ್ಮಕ ಓದುವಿಕೆ ಹೀಗೆ ಮಕ್ಕಳಿಗೆ ಪರಸ್ಪರರ ಆಲೋಚನೆಗಳು ಮತ್ತು ದೃಷ್ಟಿಕೋನಗಳೊಂದಿಗೆ ತೊಡಗಿಸಿಕೊಳ್ಳಲು ಒಂದು ಅವಕಾಶವನ್ನು ಸೃಷ್ಟಿಸುತ್ತದೆ ಮತ್ತು ಪಠ್ಯದೊಂದಿಗೆ ವೈಯಕ್ತಿಕ ಸಂಪರ್ಕವನ್ನು ಮಾಡಲು ಇದು ಅವರಿಗೆ ಅನುವು ಮಾಡಿಕೊಡುತ್ತದೆ. ಅಂತಹ ಚರ್ಚೆಗಳ ಸಮಯದಲ್ಲಿ ಹೊರಹೊಮ್ಮುವ ವಿಭಿನ್ನ ದೃಷ್ಟಿಕೋನಗಳನ್ನು ಆಲಿಸುವುದರಿಂದ

3 See: ELI's Practitioner Brief 9, 'Reading Aloud With Young Children.' Access it here: http://eli.tiss.edu/wp-content/uploads/2017/08/ELI_Practioner_Brief_9_Reading-Aloud_With_Young_Children.pdf

ಮತ್ತು ಪ್ರತಿಕ್ರಿಯಿಸುವುದರಿಂದ ಮಕ್ಕಳ ತಿಳುವಳಿಕೆ ಪರಿಷ್ಕಾರವಾಗುತ್ತದೆ, ಅವರ ಅನುಮಾನಗಳನ್ನು ಪರಿಹರಿಸುತ್ತದೆ ಮತ್ತು ಪಠ್ಯದೊಂದಿಗೆ ಅವರ ಸಂಬಂಧವನ್ನು ವಿಸ್ತರಿಸುತ್ತದೆ. ಚರ್ಚೆಗಳಿಗೆ ಅನುಕೂಲವಾಗುವಂತೆ ಮತ್ತು ಮಧ್ಯಸ್ಥಿಕೆ ವಹಿಸುವಲ್ಲಿ ಮತ್ತು ಆಳವಾದ ಅರ್ಥ-ತಯಾರಿಕೆಗೆ ಮಾರ್ಗದರ್ಶನ ನೀಡುವಲ್ಲಿ ಇದು ಶಿಕ್ಷಕನಿಗೆ ಸಕ್ರಿಯ ಪಾತ್ರ ವಹಿಸಲು ಅನುವು ಮಾಡಿಕೊಡುತ್ತದೆ.



ಚಿತ್ರ 3. ಸಂವಾದಾತ್ಮಕ ಗಟ್ಟಿಯಾಗಿ ಓದುವ ಚಟುವಟಿಕೆಗಳು ಮಕ್ಕಳಿಗೆ ಶ್ರೇಷ್ಠ ಪಠ್ಯಗಳನ್ನು ಪರಿಚಯಿಸಲು ಸಹಾಯ ಮಾಡುತ್ತದೆ ಮತ್ತು ಅವರ ಆಲೋಚನೆಗಳಿಗೆ ಧ್ವನಿ ನೀಡಲು ಸಹಾಯ ಮಾಡುತ್ತದೆ. **ಚಿತ್ರಕೃಪೆ**: ಶ್ರೇಯ ರಕ್ಷಿತ್.

ಈ ತತ್ವಗಳ ಆಧಾರದ ಮೇಲೆ, ನಾವು 18 ಗಟ್ಟಿಯಾಗಿ ಓದುವ ಚಟುವಟಿಕೆಗಳ ಸೆಷನ್‌ಗಳನ್ನು ನಡೆಸಿದ್ದೇವೆ, ನಂತರ ಇತರ ಸೆಷನ್‌ಗಳಲ್ಲಿ ಮಕ್ಕಳು ಪಠ್ಯಗಳಿಗೆ ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಮಾಡಿಕೊಟ್ಟೆವು. ಆಯ್ಕೆ ಮಾಡಿದ ಪಠ್ಯಗಳು ಬಂಗಾಳಿಯಲ್ಲಿ ಮಕ್ಕಳ ಸಾಹಿತ್ಯಕ್ಕೆ ಮೆಚ್ಚುಗೆ ಪಡೆದ ಲೇಖಕರಿಂದ ರಚಿತವಾದುದಾಗಿದ್ದವು.

## ಕಲಿಕೆಗಳು ಮತ್ತು ಶಿಫಾರಸುಗಳು


ಗಟ್ಟಿಯಾಗಿ ಓದುವ ಚಟುವಟಿಕೆಗಳನ್ನು ಪ್ರಯೋಗಿಸಲು ಆರು ವಾರಗಳ ಅವಧಿ ಸಾಕಾಗಲಿಲ್ಲ. ನಾವು ಹಿಂದಿರುಗಿ ಬರುವ ಸಮಯ ಸನ್ನಿಹಿತವಾದಾಗ ಶ್ರೇಯಾ ತಾನು ಮಾಡಿದ ಟಿಪ್ಪಣಿಗಳು, ಆಡಿಯೊ-ರೆಕಾರ್ಡಿಂಗ್‌ಗಳು ಮತ್ತು ಮಕ್ಕಳ ಬರಹಗಳು ಮತ್ತು ರೇಖಾಚಿತ್ರಗಳ ಸಂಗ್ರಹವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಸಿದ್ಧತೆ ನಡೆಸಲಾರಂಭಿಸಿದಳು. ಆದ್ದರಿಂದ ನಾವು ಇಲ್ಲಿ ಪ್ರಸ್ತುತಪಡಿಸುತ್ತಿರುವುದು ನಮ್ಮ ಚಟುವಟಿಕೆಯಿಂದ ನಮಗೆ ದೊರೆತ ಪ್ರಾಥಮಿಕ ಅರ್ಥವನ್ನು ಮಾತ್ರ. ಇದು ಈ ಅಂಶಗಳನ್ನು ಮತ್ತಷ್ಟು ಅನ್ವೇಷಿಸಲು ಪ್ರೇರೇಪಿಸುತ್ತದೆ ನಿಮಗೆ ಸಹಾಯ ಮಾಡುತ್ತದೆ ಎಂದು ನಾವು ಭಾವಿಸುತ್ತೇವೆ.

**ಸಂದರ್ಭೋಚಿತವಾಗಿ ಸಂಬಂಧಿಸಿದ ಪಠ್ಯಗಳನ್ನು ಬಳಸುವುದು ಮುಖ್ಯ**. ಮಕ್ಕಳಿಗೆ ಕಥೆಗಳನ್ನು ಎಚ್ಚರಿಕೆಯಿಂದ ಆರಿಸುವುದು, ಅವರ ಸಂದರ್ಭಗಳನ್ನು ಮತ್ತು ಅವರ ವಯಸ್ಸನ್ನು ಗಮನದಲ್ಲಿಟ್ಟುಕೊಂಡು ಪಠ್ಯಗಳೊಂದಿಗೆ ಅವರನ್ನು ತೊಡಗಿಸುವುದರಿಂದ ಅವರಿಗೆ ಪಠ್ಯದೊಂದಿಗೆ ತೊಡಗಲು ಅನುಕೂಲವಾಯಿತು. ಅವರು ಕಥೆಗಳನ್ನು ಕೇಳಿದ ನಂತರ ಅದನ್ನು ತಮ್ಮ ಅನುಭವಗಳೊಂದಿಗೆ ಸಂಪರ್ಕಿಸಿಕೊಂಡರು. ಪಾತ್ರಗಳ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವಾಗಲೆಲ್ಲಾ ಅವರು ಪಠ್ಯದಿಂದ ಸ್ವಯಂ ಸಂಪರ್ಕಗಳನ್ನು ಮಾಡಿಕೊಂಡರು.
ಎಚ್ಚರಿಕೆಯಿಂದ ಯೋಜಿತವಾದ ಮತ್ತು ಉದಾರವಾದ ರಚನಾತ್ಮಕ ಚರ್ಚೆಗಳಿಂದ ಮಕ್ಕಳ ಭಾವನೆಗಳು, ಅನುಮಾನಗಳು, ನಿರೀಕ್ಷೆಗಳು, ಪ್ರೆಡಿಕ್ಷನ್ಸ್ ಮತ್ತು ತೀರ್ಮಾನಗಳನ್ನು ಹೊರತರುವಲ್ಲಿ

ಸಹಾಯವಾಯಿತು. ಅನೇಕ ಬಾರಿ, ಚರ್ಚೆಯ ನಂತರ ದೃಶ್ಯ ಕಲೆ ಬಳಸಿ ಮಾಡಿದ ಲಿಖಿತ ಪ್ರತಿಕ್ರಿಯೆ / ದೃಶ್ಯ ಪ್ರತಿಕ್ರಿಯೆಗಳಿಂದ ಅವರಿಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಲಾಗುತ್ತಿತ್ತು. ಬಹು ವಿಧಾನಗಳನ್ನು ಬಳಸುವುದರಿಂದ ಮಕ್ಕಳಿಗೆ ಪಠ್ಯದೊಂದಿಗೆ ತೊಡಗಿಸಿಕೊಳ್ಳಲು ಅನೇಕ ಅವಕಾಶಗಳು ದೊರಕಿತು ಮತ್ತು ಇದನ್ನು ಬಳಸಿಕೊಂಡು ವಿಭಿನ್ನ ರೀತಿಯ ಆಲೋಚನೆಗಳನ್ನು ಮತ್ತು ಐಡಿಯಾಗಳನ್ನು ಅಭಿವ್ಯಕ್ತಿಪಡಿಸಲು ಸಾಧ್ಯವಾಯಿತು.

ಕಾಗ್ ನೋಯಿ (ಲೀಲಾ ಮಜುಂದರ್, ಕಾಗ್ ನೋಯಿ, ಆನಂದ ಪ್ರಕಾಶಕರು, 2018) ಪಾಠಗಳಿಂದ ನಾವು ಇದನ್ನು ಉದಾಹರಣೆಗಳೊಂದಿಗೆ ವಿವರಿಸುತ್ತೇವೆ. ಈ ಕಥೆಯಲ್ಲಿ ಬುಡೋ ಎಂಬ ಚಿಕ್ಕ ಹುಡುಗನಿರುತ್ತಾನೆ, ಅವನು ಪಕ್ಷಿಗಳ ಗೂಡಿನಿಂದ ವಿಚಿತ್ರವಾಗಿ ಕಾಣುವ ಮೊಟ್ಟೆಯನ್ನು ಕದ್ದಿರುತ್ತಾನೆ. ಮೊಟ್ಟೆಯನ್ನು ಕದ್ದ ಬಗ್ಗೆ ಹುಡುಗ ಅನುಭವಿಸುವ ಭಯ ಮತ್ತು ಪಕ್ಷಿಗಳು ಅದನ್ನು ಹುಡುಕುತ್ತಾ ಬಂದರೆ ಏನು ಗತಿ ಎಂಬ ಆತಂಕದ ಕುರಿತಾದ ಕಥೆ ಇದು.

ಈ ಕಥೆಯು ಮಕ್ಕಳಿಗೆ ಬಲವಾದ ವೈಯಕ್ತಿಕ ಸಂಪರ್ಕಗಳನ್ನು ಹೊಂದುವ ಸಾಮರ್ಥ್ಯವನ್ನು ಒದಗಿಸುತ್ತದೆ ಮತ್ತು ಅವರು ಆತಂಕಕ್ಕೊಳಗಾದ ಸಮಯದ ನಿದರ್ಶನಗಳನ್ನು ಹಂಚಿಕೊಳ್ಳಲು ಇದು ಒಂದು ಆರಂಭಿಕ ಹಂತವಾಗಿದೆ. ಚರ್ಚೆಯ ನಂತರ, ಪಠ್ಯಕ್ಕೆ ಪ್ರತಿಕ್ರಿಯೆಯಾಗಿ ಬರೆಯಲು ಅಥವಾ ಚಿತ್ರಿಸಲು ಮಕ್ಕಳನ್ನು ಪ್ರೋತ್ಸಾಹಿಸಲಾಯಿತು.



.

ಈ ಉದಾಹರಣೆಯಲ್ಲಿನ ಮೊದಲ ಪ್ರತಿಕ್ರಿಯೆಯು, ಮಕ್ಕಳು ತಾವು ಅನುಭವಿಸಿದ ಆತಂಕದ ಭಾವನೆಯೊಂದಿಗೆ ಹೇಗೆ ಸಂಪರ್ಕ ಸಾಧಿಸಲು ಪ್ರಯತ್ನಿಸುತ್ತಿದ್ದರು ಎಂಬುದನ್ನು ತೋರಿಸುತ್ತದೆ, ಆದರೆ ಎರಡನೇ ಪ್ರತಿಕ್ರಿಯೆ (ಚಿತ್ರ 4 ನೋಡಿ) ಪಾತ್ರವು ಆತಂಕಕ್ಕೊಳಗಾದ ದೃಶ್ಯವನ್ನು ಮಗು ಹೇಗೆ ದೃಶ್ಯೀಕರಿಸಿದೆ ಎಂಬುದನ್ನು ತೋರಿಸುತ್ತದೆ. ಪಾತ್ರದ ಪರಿಸ್ಥಿತಿಯನ್ನು ಚಿತ್ರಿಸಲು ಮಗು ವಿವರಗಳನ್ನು ಸೇರಿಸುತ್ತದೆ. ಇದು ಮಗುವಿನ ಕಲ್ಪನೆಯು ಲೇಖಕರ ಕಲ್ಪನೆಯನ್ನು ಅರ್ಧದಲ್ಲಿ ಸಂಧಿಸುವ ಒಂದು ಉದಾಹರಣೆಯಾಗಿದೆ. ಪಾತ್ರವು ಛತ್ರಿಯೊಂದನ್ನು ನೋಡುವ ಮೂಲಕ ಪಕ್ಷಿಗಳನ್ನು ನೆನಪಿಸಿಕೊಳ್ಳುವಂತಹ ವಿವರಗಳು ಕಥೆಯಲ್ಲಿವೆ. ರಾತ್ರಿ ಸಮಯವನ್ನು ಬಿಂಬಿಸುವ ಲಾಟೀನು, ಗಡಿಯಾರದ ಸಮಯ, ಬುಡೋನ ಮನಸ್ಸಿನಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತೋರಿಸಲು ಗುಳ್ಳೆಯನ್ನು ಸೃಷ್ಟಿ ಇವೆಲ್ಲ ಕಥೆಯಲ್ಲಿನ ಪರಿಸ್ಥಿತಿಯ ಬಗ್ಗೆ ಅಸಿಮ್‌ನ ಗ್ರಹಿಕೆಯನ್ನು ತೋರಿಸುತ್ತದೆ. .

> ಇದು ಬಹಳ ಹಿಂದಿನ ಕತೆ . ನಾನು ಈಜುವುದನ್ನು ಕಲಿತಿರಲಿಲ್ಲ. ಒಂದು ದಿನ ನಾನು ನನ್ನ ತಂದೆಯೊಂದಿಗೆ ಸ್ನಾನ ಮಾಡಲು ಕೊಳಕ್ಕೆ ಇಳಿದೆ. ನನ್ನ ತಂದೆ ನನ್ನನ್ನು ಹಿಡಿದಿರುವಾಗ ನಾನು ಈಜಲು ಪ್ರಯತ್ನಿಸುತ್ತಿದ್ದೆ. ನಾನು ನನ್ನ ತಂದೆಯ ಕೈಹಿಡಿತವನ್ನು ಬಿಡಿಸಿಕೊಂಡು ಜಾರಿ ಮುಳುಗಿದೆ. ಆಗ ನನಗೆ ತುಂಬಾ ಭಯವಾಯಿತು ಮತ್ತು ನಾನು ಸಾಯುತ್ತೇನೆ ಎಂದು ಭಾವಿಸಿದೆ. ಆದರೆ ನನ್ನ ತಂದೆ ನನ್ನನ್ನು ಉಳಿಸಿದರು ಮತ್ತು ಆಗ ನಾನು ಪ್ರಜ್ಞಾಹೀನನಾಗಿದ್ದೆ. (ಅಸಿಮ್, ಮಗುವಿನ ಬರವಣಿಗೆ, 15.11.2018)

*ಚಿತ್ರ 4*. ಬುಡೋ ಅನುಭವಿಸಿದ ಆತಂಕವನ್ನು ಚಿತ್ರಿಸಲು ಅಸಿಮ್‌ನ ರೇಖಾಚಿತ್ರದ ಅಸಿಮ್‌ನ ಪ್ರತಿಕ್ರಿಯೆ.

**ಚಿತ್ರಕೃಪೆ**: ಶ್ರೇಯ ರಕ್ಷಿತ್.

ಮಕ್ಕಳು ಬಳಸುವ ಭಾಷೆಯೊಂದಿಗೆ ಸಂಬಂಧ ಹೊಂದಬೇಕೆಂಬ ಉದ್ದೇಶಕ್ಕೆ ಪಠ್ಯಗಳು ಬಂಗಾಳಿ ಭಾಷೆಯಲ್ಲಿದ್ದವು. ಕೆಲವು ಪಠ್ಯಗಳು ಮಕ್ಕಳ ಬಾಹ್ಯ ಸಂದರ್ಭಗಳನ್ನು ಪ್ರತಿಬಿಂಬಿಸುತ್ತಿದ್ದವು, ಆದರೆ ಬಾಹ್ಯ ಸಂದರ್ಭಗಳಿಗಿಂತ, ಆಯ್ಕೆಮಾಡಿದ ಪಠ್ಯಗಳು ನಾವು ಕಲಿಸುತ್ತಿದ್ದ ಮಕ್ಕಳ ಕಾಳಜಿಗಳಿಗೆ ಸಂಬಂಧಿಸಿವೆ ಎಂಬುದು ಹೆಚ್ಚು ಮುಖ್ಯವಾದುದೆಂದು ನಮಗೆ ಅರಿವಾಯಿತು. ಕೆಲವು ಕಾಳಜಿಗಳು ಸ್ವಭಾವದಲ್ಲಿ ನಿರ್ದಿಷ್ಟವಾದವುಗಳಾದರೆ ಕದಿಯುವಾಗ ಅನುಭವಿಸುವ ಆತಂಕದಂತಹ ಇತರೆ ಕಾಳಜಿಗಳು ಬಹುತೇಕ ಮಕ್ಕಳು ಹಂಚಿಕೊಳ್ಳುವಂತಹುವುಗಳಾಗಿದ್ದವು.

.

ಆದ್ದರಿಂದ, ನಾವು ಸಂದರ್ಭೋಚಿತ-ಸಂಬಂಧಿತ ಪಠ್ಯಗಳನ್ನು ಆಯ್ಕೆ ಮಾಡುವ ಬಗ್ಗೆ ಮಾತನಾಡುವಾಗ, ಪಠ್ಯಗಳು ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತೆರೆದಿಡುವಂತಿರಬೇಕು ಎಂಬುದು ಅದರ ಅರ್ಥ. ಮಕ್ಕಳು ತಮ್ಮ ಭಾವನೆಗಳನ್ನು, ಇತರರೊಂದಿಗಿನ ಪರಸ್ಪರ ಸಂಬಂಧಗಳನ್ನು ಮತ್ತು ಕ್ರಿಯೆಗಳನ್ನು ಪ್ರತಿಬಿಂಬಿಸಲು ಸಹಾಯ ಮಾಡುವ ಪಠ್ಯಗಳನ್ನು ಆರಿಸುವುದರಲ್ಲಿ ಪಠ್ಯದ ಪ್ರಸ್ತುತತೆ ತಿಳಿದುಬರುತ್ತದೆ. ಈ ಅಂಶವನ್ನು ನಂತರ ಉದಾಹರಣೆಯ ಮೂಲಕ ಪಠ್ಯವು ತನ್ನನ್ನು ತಾನೇ ಸಂಕೀರ್ಣ ಭಾವನೆಗಳ ಚರ್ಚೆಗೆ ಎಡೆಮಾಡಿಕೊಡುವ ಬಗ್ಗೆ ವಿವರಿಸುತ್ತೇವೆ.

**ಅರ್ಥವನ್ನು ರೂಪಿಸಿಕೊಳ್ಳಲು ಒಳ್ಳೆಯ ಪ್ರಶ್ನೆಗಳನ್ನು ಕೇಳುವುದು ಮುಖ್ಯ**. ಪಠ್ಯಗಳಿಗೆ ಆಳವಾಗಿ ಪ್ರತಿಕ್ರಿಯಿಸಲು ಮಕ್ಕಳಿಗೆ ಸಹಾಯ ಮಾಡುವಲ್ಲಿ ಶಿಕ್ಷಕಿ (ಶ್ರೇಯಾ) ಪ್ರಮುಖ ಪಾತ್ರ ವಹಿಸಿದ್ದರು. ಪ್ರತಿ ತರಗತಿಗೂ ಅವರು ಒಳ್ಳೆಯ ಯೋಜನೆಯೊಂದಿಗೆ, ಸ್ಪಷ್ಟ ಉದ್ದೇಶಗಳೊಂದಿಗೆ ಮತ್ತು ತಾನು ಬಯಸಿದ ಪ್ರಶ್ನೆಗಳನ್ನು ಕೇಳುವ ಸಲುವಾಗಿ ಹೋಗುತ್ತಿದ್ದರು.[4]

ಈ ಸಂವಹನವು ಪಠ್ಯವನ್ನು ವ್ಯಾಖ್ಯಾನಿಸಲು ಶಿಕ್ಷಕರ ಮಧ್ಯಸ್ಥಿಕೆ ವಿದ್ಯಾರ್ಥಿಗಳಿಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ತೋರಿಸುತ್ತದೆ. ಇದು ಕೂಡ ಈ ಹಿಂದೆ ಪ್ರಸ್ತಾಪಿಸಲಾಗಿದ್ದ ಕಾಗ್ ನೋಯಿ ಕುರಿತಾದದ್ದು (ಲೀಲಾ ಮಜುಂದರ್, ಕಾಗ್ ನೋಯಿ, ಆನಂದ ಪ್ರಕಾಶಕರು, 2018). ಅವನು ಮೊಟ್ಟೆಯನ್ನು ಕದ್ದ ನಂತರ, ಬುಡೋ ತನ್ನ ಹಾಸಿಗೆಯ ಅಂಚಿನಲ್ಲಿ ಕುಳಿತಿರುವ ಪಕ್ಷಿಗಳನ್ನು ನೋಡುತ್ತಾನೆ, ಅದು ಅವನನ್ನು "ಓಹ್, ನೀನು ನಮ್ಮ ಮೊಟ್ಟೆಗಳನ್ನು ಬೇಯಿಸಿ ತಿನ್ನಲು ಬಯಸುವಿಯಾ?" ಎಂದು ಕೇಳುತ್ತದೆ. ಈ ಸಮಯದಲ್ಲಿ, ಪಠ್ಯದ ಸುತ್ತ ಈ ಕೆಳಗಿನ ಚರ್ಚೆ ನಡೆಯಿತು.

[4] See: ELI's Practitioner Brief 9, 'Reading Aloud With Young Children.'

ಶ್ರೇಯಾ: ನಿನ್ನ ಪ್ರಕಾರ ಬುಡೋೀ ಯಾಕೆ ಹೆದರಿದ್ದ?

ಪ್ರದೀಪ್: ಮೊಟ್ಟೆಗಳನ್ನು ಕದಿಯುವಾಗ ಪಕ್ಷಿಗಳು ತನ್ನನ್ನು ಕುಕ್ಕುತ್ತವೆ ಎಂದು ಭಾವಿಸಿ ಬುಡೋೀ ಹೆದರುತ್ತಿದ್ದ

ಅಸಿಮ್: ಪಕ್ಷಿಗಳು ತನ್ನ ಬಳಿಗೆ ಬರುತ್ತಿವೆ ಎಂದು ಭಾವಿಸಿದ್ದರಿಂದ ಅವನಿಗೆ ಮಲಗಲು ಸಾಧ್ಯವಾಗಲಿಲ್ಲ.

ಇನಾಯತ್: ಛತ್ರಿಗಳು ಕಪ್ಪು ಬಣ್ಣದ್ದಾಗಿದ್ದು ಪಕ್ಷಿಗಳನ್ನು ಹೋಲುತ್ತಿತ್ತು . ಆದ್ದರಿಂದ ಅವನು ಅದನ್ನು ನೋಡಿ ಭಯಭೀತನಾಗಿದ್ದ .

ಶ್ರೇಯಾ: ಪಕ್ಷಿಗಳು ನಿಜವಾಗಿಯೂ ಬಂದು ಅವನ ಹಾಸಿಗೆಯ ಮೇಲೆ ಕುಳಿತುಕೊಂಡವೇ?

ಫರ್ಕಾನ್: ಹೌದು! ಅವು ತಮ್ಮ ಮೊಟ್ಟೆಗಳನ್ನು ವಾಪಾಸ್ಸು ಪಡೆಯಬೇಕೆಂದಿದ್ದವು.

ಶ್ರೇಯಾ: ನಿಜವಾಗಿಯೂ ಪಕ್ಷಿಗಳು ಒಳಗೆ ಬಂದು ಬುಡೊ ಜೊತೆ ಮಾತನಾಡಿದವೇ? ಅಥವಾ ಅವೆಲ್ಲ ಬರೀ ಅವನ ಊಹೆಯೇ?

ಇನಾಯತ್: ಹೌದು, ಅವನು ಹೆದರಿದ್ದರಿಂದ ಊಹಿಸುತ್ತಿದ್ದ.

ಶ್ರೇಯಾ: ನೀವು ಎಂದಾದರೂ ಬುಡೋೀನಂತೆ ಹೆದರಿದ್ದೀರಾ?

(ಮಕ್ಕಳು ಸರ್ವಾನುಮತದಿಂದ ಹೌದು ಎಂದು ಹೇಳಿದರು.)

ಶ್ರೇಯಾ: ನಿಮ್ಮ ಪ್ರಕಾರ ಬುಡೋೀ ಯಾಕೆ ಹೆದರಿದ್ದ?

ಅಸಿಮ್: ತನ್ನದಲ್ಲದ ಯಾವುದನ್ನೋ ಅವನು ತೆಗೆದುಕೊಂಡಿದ್ದನು (ತರಗತಿ ಚರ್ಚೆ, 15.11.2018)

ಇಲ್ಲಿ, ಆರಂಭದಲ್ಲಿ, ಕೆಲವು ಮಕ್ಕಳು ಪಠ್ಯವನ್ನು ಅಕ್ಷರಶಃ ಅರ್ಥ ಮಾಡಿಕೊಂಡದ್ದನ್ನು ನಾವು ನೋಡುತ್ತೇವೆ - ಪಕ್ಷಿಗಳು ತಮ್ಮ ಮೊಟ್ಟೆಯನ್ನು ಕದ್ದಿದ್ದಕ್ಕಾಗಿ ಬುಡೋ ಮೇಲೆ ಕೋಪಗೊಂಡಿದ್ದವೆಂದು ಮತ್ತು ಅದಕ್ಕಾಗಿ ಅವನ ಮೇಲೆ ಆಕ್ರಮಣ ಮಾಡಲು ಬರುತ್ತಿದ್ದವೆಂದು ಮಕ್ಕಳು ಭಾವಿಸಿದ್ದರು. ಶಿಕ್ಷಕರ ಸಹಾಯದಿಂದ , ಕಳ್ಳತನ ಮಾಡಿದ್ದರಿಂದ ಬುಡೂ ಉದ್ವಿಗ್ನನಾಗಿದ್ದ ; ಬಹುಶಃ ಪಕ್ಷಿಗಳು ಅಕ್ಷರಶಃ ಅಲ್ಲಿಗೆ ಬರಲಿಲ್ಲ, ಅವನ ಮೇಲೆ ಆಕ್ರಮಣ ನಡೆಸಲಿಲ್ಲ ಎಂದು ಮಕ್ಕಳು ಅರ್ಥಮಾಡಿಕೊಂಡರು. . ಅನೇಕ ನಿದರ್ಶನಗಳಲ್ಲಿ, ಗಣನೀಯ ಸಹಾಯ ಮತ್ತು ಮಾರ್ಗದರ್ಶನದ ಚರ್ಚೆಗಳಿಲ್ಲದೆ ಮಕ್ಕಳಿಗೆ ಪಠ್ಯಗಳ ಅರ್ಥವನ್ನು ಮೀರಿ ಹೊರಗೆ ಹೋಗಿ ಯೋಚಿಸಲು ಸಾಧ್ಯವಿಲ್ಲ ಎಂಬುದನ್ನು ಶ್ರೇಯಾ ಗಮನಿಸಿದರು.

**ಶ್ರೇಷ್ಠ ಪಠ್ಯಗಳು ಮತ್ತು ಸುಗಮ ಚರ್ಚೆಗಳು ಸಂಕೀರ್ಣ ಭಾವನೆಗಳನ್ನು ಪರೀಕ್ಷಿಸಲು ಅವಕಾಶವನ್ನು ಸೃಷ್ಟಿಸಿಕೊಡುತ್ತವೆ.** ಶ್ರೇಷ್ಠ ಸಾಹಿತ್ಯ ಬಳಸುವ ಕುರಿತ ಒಂದು ಮುಖ್ಯ ವಾದವೇನೆಂದರೆ ಮಕ್ಕಳು ತಮ್ಮ ಬಗ್ಗೆ ಮತ್ತು ಅವರ ಸುತ್ತಲಿನ ಪ್ರಪಂಚದೊಂದಿಗಿನ ಅವರ ಸಂಬಂಧದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಪಡೆಯಬೇಕೆಂಬುದಾಗಿದೆ. ಈ ತಿಳಿವಳಿಕೆ ಅವರ ಆಲೋಚನೆಗಳನ್ನು ಮಾತ್ರವಲ್ಲದೆ, ಅವರ ಭಾವನೆಗಳನ್ನು ಸಹ ಒಳಗೊಂಡಿದೆ. ನೂರು ಮತ್ತು ಟುನಿ ಡಾ ಬಗ್ಗೆ ಈ ಟಿಪ್ಪಣಿಯಲ್ಲಿ ಆರಂಭದಲ್ಲಿ ಓದಿದ್ದು ನಿಮಗೆ ನೆನಪಿದೆಯೇ? ಹಳ್ಳಿಯ ಇತರ ಹುಡುಗರು ಅವನನ್ನು ಬೆದರಿಸಿ ನೂರುನ ಮರದ ಬಂಡಿಯನ್ನು ಮುರಿದಾಗ ಟುನಿ ನೂರು ಪರವಾಗಿ ನಿಲ್ಲದೆ ಹೋದುದು ನಿಮಗೆ ನೆನಪಿದೆಯೇ? ಇದು ಇಬ್ಬರ ನಡುವೆ ಎಂದಿಗೂ ಪರಿಹರಿಸಲಾಗದ ತಪ್ಪು ತಿಳುವಳಿಕೆಯನ್ನು ಉಂಟುಮಾಡಿತು, ಏಕೆಂದರೆ ಟುನಿ ದೂರದ ತನ್ನ ಮಾಮಾನ (ತಾಯಿಯ ಅಣ್ಣ ) ಮನೆಯಲ್ಲಿದ್ದ. ಆಗ ನೂರು ನಾಯಿ ಕೆಮ್ಮಿನಿಂದ ತೀರಿಕೊಂಡ . ಅವನು ತುಂಬಾ ಪ್ರೀತಿಸಿದ ನೂರುವಿನ ನೆನಪಿಗಾಗಿ , ಟುನಿ ತನ್ನ ಹಳ್ಳಿಗೆ ಮರಳಿ ಬಂದನು. ಈ ಕಥೆಯನ್ನು ಮಕ್ಕಳಿಗೆ ಗಟ್ಟಿಯಾಗಿ ಓದುವ ಚಟುವಟಿಕೆಗಳ ಮೂಲಕ ಹೇಳಿದಾಗ ಅವರ ಸಂಭಾಷಣೆಗಳು ಹೇಗೆ ತೆರೆದುಕೊಳ್ಳುತ್ತವೆ ಎಂಬುದನ್ನು ಈ ಮೊದಲು ಪ್ರಸ್ತುತಪಡಿಸಿದ ಭಾಗದಲ್ಲಿ ತೋರಿಸಲಾಗಿದೆ; ಗೆಳೆಯರ ಒತ್ತಡದಿಂದಾಗಿ ಟುನಿ ನೂರುನನ್ನು ಹಚ್ಚಿಕೊಳ್ಳುವುದಿಲ್ಲ ಎಂಬ ತಿಳುವಳಿಕೆಯನ್ನು ಅವರು ನಿಧಾನವಾಗಿ ಸಾಮೂಹಿಕವಾಗಿ ಬೆಳೆಸಿಕೊಂಡಿರುತ್ತಾರೆ.

ಬೆದರಿಸುವಿಕೆ ಎಂಬುದು ಮಕ್ಕಳಿಗೆ ಪರಿಚಿತ ಅನುಭವವಾಗಿದೆ. ಹೆಚ್ಚಿನ ಮಕ್ಕಳಿಗೆ ಪರಿಚಿತವಾಗಿರುವ ಸನ್ನಿವೇಶಗಳನ್ನು ಕಥೆಯ ಮೂಲಕ ಪ್ರಸ್ತುತಪಡಿಸಿದಾಗ, ಅದು ಅವರ ಅನುಭವದಿಂದ ಒಂದು ಹೆಜ್ಜೆ ಹಿಂದಕ್ಕೆ ಹೋಗಿ ಅಂತಹ ಸಂದರ್ಭಗಳಲ್ಲಿ ಅವರು ನೀಡಿದ ಪ್ರತಿಕ್ರಿಯೆಗಳನ್ನು ಪುನರ್ವಿಮರ್ಶಿಸಲು ಅವರಿಗೆ ಅನುವು ಮಾಡಿಕೊಡುತ್ತದೆ. ಮಕ್ಕಳಿಗೆ ಭವಿಷ್ಯದಲ್ಲಿ ವಿಭಿನ್ನ ಅನುಭವಗಳಿಗೆ ಪ್ರತಿಕ್ರಿಯಿಸುವ ಅವಕಾಶಗಳು ಒದಗಿ ಬರುತ್ತದೆಯೇ ಎಂಬ ಪ್ರಶ್ನೆ ಬಹಳ ಮುಖ್ಯ. ಅಂತಹ ಪ್ರತಿಕ್ರಿಯೆಗಳಿಂದ ಅವರ ನಡವಳಿಕೆಯಲ್ಲಿ ಬದಲಾವಣೆ ಉಂಟಾಗುತ್ತದೆಯೇ ಅಥವಾ ಇಲ್ಲವೇ ಎಂಬುದು ಬೇರೆಯದೇ ಪ್ರಶ್ನೆಯಾಗಿದೆ.

ಜೋರಾಗಿ ಓದುವ ಚಟುವಟಿಕೆ ನಂತರ, ಪ್ರತಿಯೊಬ್ಬರಿಗೂ ಕಥೆಯ ಬಗ್ಗೆ ಏನು ಅನಿಸುತ್ತದೆ ಎಂಬುದರ ಸುತ್ತ ಚರ್ಚೆ ನಡೆಯಿತು. ಕಥೆಯಲ್ಲಿನ ವಿಭಿನ್ನ ಅಂಶಗಳು ವಿಭಿನ್ನ ಮಕ್ಕಳನ್ನು ಆಕರ್ಷಿಸುತ್ತವೆ ಎಂಬುದು ಸ್ಪಷ್ಟವಾಯಿತು. ಕೆಲವರಿಗೆ, ನೂರು ಎಂಬ ಸಣ್ಣ ಹುಡುಗ ಕರುಣೆ, ಜೀವನೋತ್ಸಾಹಗಳಿಂದ ತುಂಬಿದವನಾಗಿದ್ದರೆ; ಇತರರಿಗೆ, ಇದು ಟುನಿ ಮತ್ತು ನೂರು ನಡುವಿನ ಆಳವಾದ ಪ್ರೀತಿಯ ಬಂಧವೆನಿಸಿತು. ನೂರು ಸಾವಿನ ದುಃಖ ಮತ್ತು ಸರಿಹೋಗದ ಸ್ನೇಹದ ಬಗ್ಗೆ ತಿಳಿಯಲು ಅನೇಕ ಮಕ್ಕಳು ಕಷ್ಟಪಟ್ಟರು, ಇವು ಸಂಕೀರ್ಣ ಭಾವನೆಗಳಾಗಿದ್ದು, ಆ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕೆಂಬ ಪ್ರೇರೇಪಣೆ ಅವರನ್ನು ಪರಸ್ಪರ ಸಂವಾದಕ್ಕೆ ಹಚ್ಚಿತು.

ಶ್ರೇಯಾ: ನಿಮಗೆ ಕಥೆ ಇಷ್ಟವಾಯಿತೇ?

ಅಸಿಮ್: ಇಲ್ಲ! ನೂರು ಅದ್ಹೇಗೆ ಹೀಗಿ ಸಾಯುವನು!

ಇನಾಯತ್: ನನಗೆ ನೂರು ತುಂಬಾ ಇಷ್ಟವಾದ . ಅವನು ತನ್ನ ನುಣುಪಾದ ತಮಾಷೆಯ ಧ್ವನಿಯಲ್ಲಿ "ಟುನಿ ದಾ" ಎಂದು ಕರೆಯುವ ರೀತಿ.... ಮತ್ತು ಟುನಿ ದಾ ಕೂಡ ಇಷ್ಟವಾದ, ಆದರೆ ಅವರು

ನೂರು ಬಂಡಿಯನ್ನು ಮುರಿದಾಗ ನನಗೆ ಬೇಜಾರಾಯಿತು.

ಪ್ರದೀಪ್: ಮತ್ತು ಅವರು ನೂರುಗೆ ಸವಾರಿ ನೀಡದೆ ಅವನನ್ನು ಕೀಟಲೆ ಮಾಡಿದ್ದು ನನಗೆ ಬೇಜಾರಾಯಿತು .

ಫರ್ಕಾನ್: ಟುನಿ ಮತ್ತು ನೂರು ಮತ್ತೆ ಸ್ನೇಹಿತರಾಗಲು ಸಾಧ್ಯವಾಗದ ಕಾರಣ ನನಗೆ ಬೇಜಾರಾಯಿತು .

ಶ್ರೇಯಾ: ಅಸಿಮಾ ಕಥೆ ನಿಮಗೆ ಇಷ್ಟವಾಯಿತೇ?

ಅಸಿಮಾ: ಹೌದು .. ಆದರೆ ಬೇಸರವಾಯಿತು ...

ಶ್ರೇಯಾ: ಊಂ ಕೆಲವೊಮ್ಮೆ, ನಮಗೆ ಜೀವನದಲ್ಲಿ ದುಃಖವಾಗುತ್ತದೆ, ಅಲ್ಲವೇ? ನಾವು ಯಾವಾಗಲೂ ಸಂತೋಷವಾಗಿರುತ್ತೇವೆಯೇ?

ಮಕ್ಕಳು (ಒಟ್ಟಿಗೆ): ಇಲ್ಲ ..


ಶ್ರೇಯಾ: ಕಥೆಗಳಲ್ಲಿ ಸಹ, ನಾವು ದುಃಖಿತರಾಗುವ ನಿದರ್ಶನಗಳಿವೆ.

ನಿಹಾರ್: ನೂರು ತಾಯಿ ಉಪ್ಪಿನಕಾಯಿಯನ್ನು ಒಣಗಲು ಹೊರಗೆ ಇಟ್ಟುಕೊಂಡಿದ್ದಾಗ ಟುನಿ ತನ್ನ ಮನೆಯಂಗಳಕ್ಕೆ ಕಾಲಿಡುವುದನ್ನು ನೋಡಿ ನೂರು ಇನ್ನಿಲ್ಲ, ಎಂದು ಅವನಿಗೆ ಹೇಳಿ ಅವನಿಗೆ ಸ್ವಲ್ಪ ಉಪ್ಪಿನಕಾಯಿ ನೀಡುತ್ತಾಳೆ ... ಅದು ನನಗೆ ಬೇಸರವಾಯಿತು

ಶ್ರೇಯಾ: ಆಗ ನಿಮಗೆ ಏನು ಬೇಸರವಾಯಿತು? ನಿಹಾರ್: ಏಕೆಂದರೆ ತಾಯಿ ನೂರುನನ್ನು ಮಿಸ್ ಮಾಡಿಕೊಳ್ಳುತ್ತಿರುತ್ತಾಳೆ . (ತರಗತಿ ಚರ್ಚೆ, 21.11.2018)

ಈ ಭಾಗದಲ್ಲಿ, ಮಕ್ಕಳು ನೂರು ಸಾವಿನ ಬಗ್ಗೆ ತಮ್ಮ ದುಃಖವನ್ನು ವ್ಯಕ್ತಪಡಿಸುವುದಲ್ಲದೇ ಅವರ ತಾಯಿ ಮೇಲೆ ಸಹಾನುಭೂತಿಯನ್ನು ಹೊಂದುವುದನ್ನು ನಾವು ನೋಡುತ್ತೇವೆ., ತಾಯಿಯ ದುಃಖದ ಬಗ್ಗೆ ಪಠ್ಯವು ಸ್ಪಷ್ಟವಾಗಿ ಉಲ್ಲೇಖಿಸುವುದಿಲ್ಲ. ಉನ್ನತ ಮಟ್ಟದ ಅರ್ಥ-ಗ್ರಹಣಕ್ಕೆ ಈ ರೀತಿ ಶಬ್ದಗಳ ನಡುವಿನ ನಿಶ್ಯಬ್ದವನ್ನು ಓದಿ ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯ - ಓದುಗರು ತಮ್ಮ ಜೀವನದ ಸನ್ನಿವೇಶಗಳನ್ನು ಅದರೊಂದಿಗೆ ನೋಡುವ ಮೂಲಕ ಮತ್ತು ಅಂತಹ ಸನ್ನಿವೇಶದಲ್ಲಿ ಪಾತ್ರಗಳು ಯಾವ ಭಾವನೆ ಹೊಂದಿರಬಹುದು ಎಂದು ಊಹಿಸುವ ಮೂಲಕ ಅದನ್ನು ಮಾಡುತ್ತಾರೆ.

**ಪಠ್ಯಕ್ಕೆ ತಮ್ಮ ಪ್ರತಿಕ್ರಿಯೆಗಳನ್ನು ಸುಧಾರಿತ ರೀತಿಯಲ್ಲಿ ವ್ಯಕ್ತಪಡಿಸಲು ಮಕ್ಕಳು ಪಠ್ಯಗಳ ಶೈಲಿಗಳನ್ನು ಎರವಲು ಪಡೆದರು**. ಗಟ್ಟಿಯಾಗಿ ಓದುವ ಚಟುವಟಿಕೆ ನಡೆಸುವಾಗ ಮಕ್ಕಳಿಗೆ ವಿಭಿನ್ನ ಸಾಹಿತ್ಯಿಕ ಅಂಶಗಳನ್ನು ಪರಿಚಯಿಸುವುದರಿಂದ ಹೊಸ ಆಲೋಚನಾ ಚೌಕಟ್ಟುಗಳನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತದೆ. ಶ್ರೇಯಾ ವಾರಗಟ್ಟಲೆ ಮಕ್ಕಳೊಂದಿಗೆ ಕೆಲಸ ಮಾಡುತ್ತಿದ್ದಂತೆ, ಮಕ್ಕಳಿಗೆ ಸಾಹಿತ್ಯಿಕ ಅಂಶಗಳಾದ ಸೆಟ್ಟಿಂಗ್, ಪಾತ್ರಗಳು, ಘಟನೆಗಳು, ಪಾತ್ರದ ಭಾವನೆಗಳು, ಆಲೋಚನೆಗಳು ಮತ್ತು ಕಾರ್ಯಗಳು ಮತ್ತು ಕಥಾವಸ್ತು ಮುಂತಾದವನ್ನು ಪರಿಚಯಿಸಿದರು. ಆರು ವಾರಗಳ ಅಂತ್ಯದ ವೇಳೆಗೆ, ಕಥೆಯಲ್ಲಿ ಈ ಅಂಶಗಳು ಹೇಗೆ ಒಟ್ಟಾಗಿ ಕೆಲಸ ಮಾಡುತ್ತವೆ ಎಂಬುದನ್ನು ಮಕ್ಕಳು ಸುಲಭವಾಗಿ ಅರ್ಥಮಾಡಿಕೊಂಡರು. ಲೇಖಕರು ಬಳಸುವ ಸಾಹಿತ್ಯಿಕ ಅಂಶಗಳು ಅಥವಾ ತಂತ್ರಗಳತ್ತ ಮಕ್ಕಳ ಗಮನವನ್ನು ಸೆಳೆದಾಗ ಮಕ್ಕಳಿಗೂ ಪಠ್ಯಕ್ಕೆ ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವಾಗ ಆ ಅಂಶಗಳನ್ನು ಬಳಸಲು ಸಹಾಯ ಮಾಡಿತು (ವುಲ್ಫ್, 2004)



ಚಿತ್ರ 5. ಒಬ್ಬ ಹುಡುಗ ಗಟ್ಟಿಯಾಗಿ ಓದಿದ ಸಮಯದಲ್ಲಿ ಕೇಳಿದ ಕಥೆಗೆ ಬರವಣಿಗೆಯ ಮೂಲಕ ಪ್ರತಿಕ್ರಿಯಿಸುತ್ತಿರುವುದು.

ಚಿತ್ರಕೃಪೆ: ಶ್ರೇಯ ರಕ್ಷಿತ್.


ಮಕ್ಕಳು ಉತ್ತಮವಾಗಿ ಸಂಪರ್ಕ ಏರ್ಪಡಿಸಿಕೊಂಡ ಮತ್ತು ತಮಗಿದು ಪ್ರಸ್ತುತವಾದುದು ಎಂಬ ಭಾವನೆ ಮೂಡಿಸಿಕೊಳ್ಳಲು ಸಹಾಯ ಮಾಡಿದ ಪಠ್ಯಗಳಲ್ಲಿ ಒಂದು ಆಮ್ ಆಂಟಿ-ಆರ್ ಭೆಪು (ಬಿಭೂತಿಭೂಷಣ್ ಬಂದೋಪಾಧ್ಯಾಯ, ಸಿಗ್ನೆಟ್ ಪ್ರೆಸ್, 1999) ಎಂಬ ಕಾದಂಬರಿಯೂ ಒಂದು. ಈ ಕಥೆಯು ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶದ್ದಾಗಿದೆ. ಇದು ಅಪು ಮತ್ತು ದುರ್ಗಾ ಎಂಬ ಇಬ್ಬರು ಒಡಹುಟ್ಟಿದವರ ನಡುವಿನ ಪ್ರೀತಿಯ ಸಂಬಂಧ ಮತ್ತು ಅವರ ಜೀವನದಲ್ಲಿ ತೆರೆದುಕೊಳ್ಳುವ ವಿವಿಧ ಅನುಭವಗಳನ್ನು ಪರಿಶೋಧಿಸುವ ಒಂದು ಅಧ್ಯಾಯ, 'ನೆಬು ಪಟಾಯೆ ಕೊರೊಮ್ಚಾ', ಸ್ಥಳೀಯವಾಗಿ ಕಲ್ಬೋಯಿಶಾಕಿ ಎಂದು ಕರೆಯಲ್ಪಡುವ ವಾಯುವ್ಯ ಚಂಡಮಾರುತದ ಸಮಯದಲ್ಲಿ ಮಾವಿನಹಣ್ಣುಗಳನ್ನು ಸಂಗ್ರಹಿಸಲು ಅಪು ಮತ್ತು ದುರ್ಗಾ ದಟ್ಟವಾದ ಕಾಡಿಗೆ ಹೋಗುವುದು ಈ ಅಧ್ಯಾಯದ ಮುಖ್ಯ ಕಥಾವಸ್ತುವಾಗಿದೆ.

ಈ ಅಧ್ಯಾಯವು ಮಕ್ಕಳಿಂದ ಹೆಚ್ಚಿನ ಪ್ರತಿಕ್ರಿಯೆಗಳನ್ನು ಪಡೆಯಿತು. ಸಾಮಾನ್ಯವಾದ ವಾಯುವ್ಯ ಚಂಡ ಮಾರುತದ ಅನುಭವವನ್ನು ಲೇಖಕರು ಸ್ಪಷ್ಟವಾಗಿ ವಿವರಿಸಿದರು, ಅದನ್ನು ಅಪು ಮತ್ತು ದುರ್ಗಾ ಇವರೊಳಗೆ ಉದ್ಭವಿಸಿದ ಭಾವನೆಗಳೊಂದಿಗೆ ತುಂಬಿಸಿದರು. ಘಟನೆಯನ್ನು ಸ್ಪಷ್ಟವಾಗಿ ವಿವರಿಸುವ ಮೂಲಕ, ಸಾಮಾನ್ಯ ಭಾವನೆಗಳನ್ನು ಹೇಗೆ ಶಕ್ತಿಯುತ ನಿರೂಪಣೆಗಳಾಗಿ ಪರಿವರ್ತಿಸಬಹುದು ಎಂಬುದನ್ನು ಮಕ್ಕಳಿಗೆ ಅರ್ಥಮಾಡಿಸಲು ಇದು ಒಂದು ಮಾರ್ಗವಾಯಿತು, ಅದನ್ನು ಮಕ್ಕಳು ತಮ್ಮ ಭಾವನೆಗಳಿಂದ ಮತ್ತು ಕಲ್ಪನೆಯಿಂದ ತುಂಬಿಸಿಕೊಂಡರು. ಈ ಕೆಳಗಿನ ಪ್ರತಿಕ್ರಿಯೆಯು ಮಗುವು ಲೇಖಕರ ಶೈಲಿಯ ಎದ್ದುಕಾಣುವ ಕಲ್ಪನಾಮಯತೆಯಿಂದ ಹೇಗೆ ಎರವಲು ಪಡೆದಿದೆ ಎಂಬುದನ್ನು ತೋರಿಸುತ್ತದೆ.

ನಮ್ಮ ಮನೆಯ ಪಕ್ಕದಲ್ಲಿ ನಾನು ಮತ್ತು ನನ್ನ ಸ್ನೇಹಿತರು ಕಬಡ್ಡಿ ಆಡುತ್ತಿದ್ದೆವು. ಇದ್ದಕ್ಕಿದ್ದಂತೆ, ಆಕಾಶದಲ್ಲಿ ಗಾಳಿ ಮೋಡಗಳು ಕಾಣಿಸಿಕೊಂಡವು; ನನಗೆ ಏನೂ ಕಾಣಿಸಲಿಲ್ಲ. ನಂತರ ಚಂಡಮಾರುತ ಪ್ರಾರಂಭವಾಯಿತು! ನಾವು ಮಾವಿನಹಣ್ಣು ಸಂಗ್ರಹಿಸಲು ತೋಟಕ್ಕೆ ಓಡಿದೆವು. ಉದ್ಯಾನವು ದೊಡ್ಡದಾಗಿತ್ತು, ಆದರೆ ಅಲ್ಲಿನ ಮರಗಳು ಚಿಕ್ಕದಾಗಿದ್ದವು. ಉದ್ಯಾನದ ಮಧ್ಯದಲ್ಲಿ ಒಂದು ದೊಡ್ಡ ಕೊಳವಿತ್ತು. ಮಾವಿನಹಣ್ಣು ಒಂದರ ನಂತರ ಒಂದರಂತೆ ಬೀಳುತ್ತಿರುವುದನ್ನು ನಾನು ನೋಡಿದೆ. ಮಾವಿನಹಣ್ಣು ಸಂಗ್ರಹಿಸಲು ಇನ್ನೂ ಅನೇಕ ಹುಡುಗರು ಬಂದರು.

ಚಂಡಮಾರುತದಲ್ಲಿ ಅನೇಕ ವಸ್ತುಗಳು ಹಾರುತ್ತಿದ್ದವು - ಧೂಳು, ಎಲೆಗಳು. ಮರಗಳ ರೆಂಬೆಗಳು ಮುರಿದು ಬೀಳುತ್ತಿದ್ದವು (ಮೋಟಮ್ ಮೋಟಮ್ ಕೋರೆ ಭಾಂಗ್ಛೆ)…. ಸ್ವಲ್ಪ ಸಮಯದ ನಂತರ ಚಂಡಮಾರುತದ ತೀವ್ರತೆ ಹೆಚ್ಚಾಯಿತು. ಬಲವಾದ ಗಾಳಿ ಮತ್ತು ಜೋರು ಮಳೆ ನಮ್ಮನ್ನು ಪೂರ್ತಿ ನೆನೆಸಿತು. ನಾನು ನಡುಗಲು ಪ್ರಾರಂಭಿಸಿದೆ. ಎಲ್ಲಾ ಮಾವಿನಹಣ್ಣುಗಳು ಗಾಳಿಯಲ್ಲಿ ತೇಲುತ್ತಿರುವುದನ್ನು ನಾನು ನೋಡಿದೆ…. ಮಳೆ

ಕಡಿಮೆಯಾದಾಗ ನಾನು ಮನೆಗೆ ಓಡಿದೆ. ನಾನು ತಂದ ಅಷ್ಟೊಂದು ಮಾವಿನಹಣ್ಣುಗಳನ್ನು ನೋಡಿ ನನ್ನ ತಾಯಿಗೆ ಆಶ್ಚರ್ಯವಾಯಿತು. ಅದರಿಂದ ಉಪ್ಪಿನಕಾಯಿ ತಯಾರಿಸುವುದಾಗಿ ಹೇಳಿದರು . (ಫರ್ದಸ್, ಮಕ್ಕಳ ಬರವಣಿಗೆ, 7.12.18.)



ಚಿತ್ರ 6. ಇನಾಯತ್ ನ ಚಂಡಮಾರುತವನ್ನು ಪ್ರದರ್ಶಿಸುತ್ತಿರುವ ಚಿತ್ರ. ಚಿತ್ರ ಕೃಪೆ: ಶ್ರೇಯಾ ರಕ್ಷಿತ್.

ಮಗುವಿನ ಚಿತ್ರಸಹಿತ ಪದಗಳ ವಿವರಣೆಯು ಸ್ವಲ್ಪ ಸ್ಪಷ್ಟವಾಗಿಲ್ಲದಿದ್ದರೂ ಸಹ ಮಗುವಿನ ಕಲ್ಪನಾ ವಿವರಣೆಯನ್ನು ಗಮನಿಸಬೇಕಿದೆ: "ಉದ್ಯಾನವನ ತುಂಬಾ ದೊಡ್ಡದಾಗಿದೆ ಮತ್ತು ಮರಗಳು ಚಿಕ್ಕದಾಗಿವೆ. ಆ ಉದ್ಯಾನವನದ ಮಧ್ಯದಲ್ಲಿ ಒಂದು ಕೊಳವಿದೆ".

ಇಲ್ಲಿ ಮತ್ತೊಂದು ಉದಾಹರಣೆ ಇದೆ, ಅಲ್ಲಿ ಮಗು ಚಿರಿಯಖಾನಾ (ಲೀಲಾ ಮಜುಂದರ್, ಕಾಗ್ ನೋಯಿ, ಆನಂದ ಪ್ರಕಾಶಕರು, 2018) ಬಗ್ಗೆ ಮಾತನಾಡುವಾಗ ಪಾತ್ರದ ಭಾವನೆಗಳ ಚೌಕಟ್ಟನ್ನು ತಾನೂ ಬಳಸಲು ಪ್ರಯತ್ನಿಸುತ್ತಿದೆ.

ಶ್ರೇಯಾ:, ಫಿರ್ದೌಸ್ ಹೇಳಿದ್ದನ್ನು ಈಗ ನಾವು ಕೇಳಿದ್ದೇವೆ! (ವಿರಾಮ)… ನಿಮಗೆಲ್ಲರಿಗೂ ಇನ್ನೇನು ಅನ್ನಿಸಿತು?

ಅಸಿಮ್: ನಾನು! ನಾನು! ನಾನು ಹೇಳಲೇ? ಭಾವನೆ! - ಕಥೆಯಲ್ಲಿ 'ಅನುಮಾನ'ದ ಭಾವನೆ ಇದೆ ಎಂದು ನಾನು ಭಾವಿಸಿದೆ ಏಕೆಂದರೆ ಮುದುಕನ ಬೆರಳಿನ ಉಗುರನ್ನು ನೋಡಿ ಅವನು ಕಳ್ಳನೆಂದು ಹುಡುಗನಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು, ತನ್ನ ತಂದೆಯ ಸಂಬಳ ಕದ್ದವನೆಂದು . ವೃದ್ಧನು ಕಳ್ಳನೆಂದು ಅವನು ಅನುಮಾನಿಸುತ್ತಾನೆ.
ಶ್ರೇಯಾ: ಸರಿ, ಅವನಿಗೆ ಏನನ್ನಿಸಿತೆಂದು ನಾವು ಅರ್ಥಮಾಡಿಕೊಂಡಿದ್ದೇವೆ… (ಪ್ರದೀಪ್ ಅಡ್ಡಿಪಡಿಸುತ್ತಾನೆ)
ಪ್ರದೀಪ್: ನಾನು "ತಂಪಾದ" ಭಾವನೆಯನ್ನು ಅನುಭವಿಸಿದೆ.
ಅಸಿಮ್ (ಸ್ಪಷ್ಟೀಕರಿಸಲು ಜೋರಾಗಿ ಹೇಳುತ್ತಾನೆ): ಅನುಮಾನ.
ಶ್ರೇಯಾ: ಸರಿ. ಪಾತ್ರವು ಅನುಮಾನಾಸ್ಪದವಾಗಿದೆ ಎಂದು ಅಸಿಮ್ ಭಾವಿಸಿದ್ದಾನೆ - "ತಂಪಾದ" ಭಾವನೆಯ ಬಗ್ಗೆ ನೀನು ಏನು ಹೇಳುತ್ತೀ? ಅದರ ಬಗ್ಗೆ ಪ್ರದೀಪ್ ನಮಗೆ ಇನ್ನಷ್ಟು ಸ್ಪಷ್ಟವಾಗಿ ತಿಳಿಸು.
(ಸ್ವಲ್ಪ ವಿರಾಮ) ಶ್ರೀ: ಹೇಳು. ನೀನೇನು ಯೋಚಿಸುತ್ತಿದ್ದೆ?

ಪ್ರದೀಪ್: ಭಾವನೆ. ಯಾಕೆಂದರೆ, ಅವನು ತನ್ನ ಪಾದಗಳನ್ನು ನದಿಯಲ್ಲಿ ಮುಳುಗಿಸಿದ ಕ್ಷಣ , ಅವನ ಪಾದಗಳು ತಕ್ಷಣ ಚಳಿಗಾಲದ ಶೀತವನ್ನು ಅನುಭವಿಸಿದವು .
(ತರಗತಿ ಚರ್ಚೆ, 22.12.2018)

ಮಕ್ಕಳು ಬಹಳ ಹೊತ್ತು ಪಾತ್ರದ ಭಾವನೆಗಳ ಬಗ್ಗೆ ಚರ್ಚಿಸುತ್ತಿದ್ದರು ಮತ್ತು ಪ್ರತಿಯೊಬ್ಬರಿಗೂ ವಿಭಿನ್ನ ರೀತಿಯ ಭಾವನೆಗಳಿವೆ ಎಂಬ ತಿಳುವಳಿಕೆಯನ್ನು ಪಡೆದರು - ಕೆಲವರು ದೈಹಿಕ ಮಟ್ಟದ ಅನುಭವವನ್ನು ಬಿಸಿಯಾದ ಅಥವಾ ತಂಪಾದ ಅನುಭವಗಳನ್ನು ಪಡೆದರೆ, ಕೆಲವರು ಮಾನಸಿಕ ಮಟ್ಟದ ಅನುಭವವನ್ನು ಕೋಪ ಅಥವಾ ಸಂತೋಷದ ಅನುಭವವನ್ನು ಪಡೆವುದನ್ನು

ಅರಿತುಕೊಂಡರು. ಈ ಭಾಗದಲ್ಲಿ, ಪಠ್ಯದ ಸುಳಿವುಗಳನ್ನು ಬಳಸಿಕೊಂಡು ಆಸಿಮ್ ಪಾತ್ರದ ಭಾವನೆಯನ್ನು ಊಹಿಸಿರುವುದನ್ನು ನಾವು ನೋಡುತ್ತೇವೆ. ಶಿಕ್ಷಕರ ಸಹಾಯವಿಲ್ಲದೆ ಮಕ್ಕಳು ಈ ರೀತಿ ಪಠ್ಯದ ಬಗ್ಗೆ ಮಾತನಾಡುವುದು ಅಸಂಭವ. ವಿದ್ಯಾರ್ಥಿಗಳೊಂದಿಗೆ ಸಾಹಿತ್ಯಿಕ ಅಂಶಗಳು ಮತ್ತು ತಂತ್ರಗಳನ್ನು ಪರಿಚಯಿಸಲು ಮತ್ತು ಚರ್ಚಿಸಲು ಪ್ರತಿಯೊಂದು ಅವಕಾಶವನ್ನೂ ಶ್ರೀಯಾ ಬಳಸಿಕೊಂಡರು.


ಈ ಅಂಶಗಳಿಗೆ ಗಮನ ಕೊಟ್ಟಿದ್ದರಿಂದ ಅವರಿಗೆ ಸಂವಹಿಸಬಲ್ಲ ಚೌಕಟ್ಟನ್ನು ನೀಡಿತು,ಇತರ ಪಠ್ಯಗಳು ಮತ್ತು ಈ ಅಂಶಗಳ ಪರಸ್ಪರ ನಿರೂಪಣೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯ ಮಾಡಿತು.

ಮುಂದಿನ ಉದಾಹರಣೆಯು ಶ್ರೇಯರವರು ಅಂತರ-ಪಠ್ಯೀಯ ಸಂಪರ್ಕಗಳನ್ನು ಮಾಡಲು ಮಾರ್ಗದರ್ಶನ ನೀಡುವುದರ ಜೊತೆಗೆ ಮಕ್ಕಳಿಗೆ ಸಾಹಿತ್ಯಿಕ ತಂತ್ರಗಳನ್ನು ಗಮನಿಸಲು ಹೇಗೆ ಸಹಾಯ ಮಾಡಿದರು ಎಂಬುದರ ಒಂದು ನೋಟವನ್ನು ನೀಡುತ್ತದೆ, (ಬಂದೋಪಾಧ್ಯಾಯ, ಆಮ್ ಆಂಟಿ-ಆರ್ ಭೆಪು, 2018).

ಶ್ರೇಯಾ: ದುರ್ಗಾಳ ದೇಹವು ಬಿರುಸಾಗಿದೆ ಎಂದು ನೀನು ಏಕೆ ಭಾವಿಸುತ್ತೀ? ನಾವು ಯಾವಾಗ ಈ ರೀತಿ ಭಾವಿಸುತ್ತೇವೆ? ಫರ್ಕಾನ್: ನಾವು ಭಯಭೀತರಾಗಿದ್ದಾಗ ಅಥವಾ ಉದ್ವಿಗ್ನರಾದಾಗ.
ಶ್ರೇಯಾ: ನಾವು ಓದಿದ ಪಠ್ಯಗಳಲ್ಲಿ ಬೇರೆ ಯಾವುದೇ ಪಾತ್ರ ಈ ರೀತಿ ಅನುಭವಿಸುತ್ತಿರುವುದನ್ನು ನೋಡಿದ್ದೀಯಾ? ಇನಾಯತ್: ಹೌದು ಹೌದು .. ಬುಡೋ… ಬುಡೋ!
ಜಾಹಿದ್: ಹೌದು, ಅವನು ಮೊಟ್ಟೆಯನ್ನು ಕದಿಯುವಾಗ ಹೆದರಿದ್ದ.
ಶ್ರೇಯಾ: ಪಾತ್ರಗಳು ಭಯಭೀತವಾಗುವುದನ್ನು ನಾವು ಬೇರೆಲ್ಲಿ ನೋಡಿದ್ದೇವೆ? ನಿಹಾರ್: ಪಟುಕ್! ಅಲ್ಲಿ ಹರಿಪಾದ ಕೂಡ ಹೆದರಿದ್ದ.
ಅಸಿಮ್: ಓಹ್, ಅವನು ಇಲಿ ವಿಷವಿರುವ ಲಾಡುವನ್ನು ತಿಂದೆನೆಂದು ಭಾವಿಸಿದಾಗ.
(ತರಗತಿ ಚರ್ಚೆ, 5.12.18)

ಹೀಗೆ, ಮಕ್ಕಳು ತಾವು ಓದಿದ್ದ ಕಥೆಯ ಅಕ್ಷರಶಃ ಅರ್ಥವನ್ನು ಮಾತ್ರ ಕಲಿಯಲಿಲ್ಲ, ಅದರ ಜೊತೆಗೆ ಅರ್ಥವನ್ನು ತಿಳಿಸಲು ಲೇಖಕರು ಬಳಸುವ ಸಾಹಿತ್ಯ ಶೈಲಿಗಳು ಮತ್ತು ತಂತ್ರಗಳ ಬಗ್ಗೆಯೂ ಸಹ ಕಲಿತರು. ಇಲ್ಲಿಯವರೆಗೆ ಓದಿದ ವಿವಿಧ ಪಠ್ಯಗಳ ನಡುವೆ ಸಂಪರ್ಕ ಸಾಧಿಸಲು ಮಕ್ಕಳಿಗೆ ಶ್ರೇಯಾ ಸಹಾಯ ಮಾಡಿದರು.

**ವಿಭಿನ್ನ ವಿಧಾನಗಳನ್ನು (ಚರ್ಚೆ, ಬರವಣಿಗೆ, ಕಲೆ) ಬಳಸಿಕೊಂಡು ಪ್ರತಿಕ್ರಿಯಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದು ಮುಖ್ಯವಾಗಿದೆ**. ಸಾಂಪ್ರದಾಯಿಕ ತರಗತಿ ಕೋಣೆಗಳಲ್ಲಿ, ನಾವು ಮಕ್ಕಳನ್ನು ಪಠ್ಯಗಳನ್ನು ವ್ಯಾಖ್ಯಾನಿಸಲು ಆಹ್ವಾನಿಸುವುದಿಲ್ಲ, ಹಾಗೆ ಆಹ್ವಾನಿಸಿದರೂ ಅದರ ಕುರಿತು ಮಾತನಾಡುವ ಮಟ್ಟಿಗೆ ಅಥವಾ ಬರೆಯುವ ಮಟ್ಟಿಗೆ ನಿರ್ಬಂಧಿಸುತ್ತೇವೆ. ಮೊದಲೇ ಹೇಳಿದಂತೆ, ಚಿಕ್ಕ ಮಕ್ಕಳು ತಮ್ಮ ಸುತ್ತಲಿನ ಸಾಂಕೇತಿಕ ಪ್ರಪಂಚಗಳನ್ನು ಅರ್ಥೈಸಿಕೊಳ್ಳುವಾಗ ಮಾತುಕತೆ, ಬರವಣಿಗೆ, ಕಲೆ, ನಾಟಕ ಮತ್ತು ಮುಂತಾದವುಗಳ ನಡುವೆ ಲೀಲಾಜಾಲವಾಗಿ ಸಂಚರಿಸುತ್ತಿರುತ್ತಾರೆ. ಈ ಬಹು ವಿಧಾನಗಳ ಪ್ರತಿಕ್ರಿಯೆಗಳನ್ನು ಬಳಸಲು ಅವಕಾಶ ಮತ್ತು ಪ್ರೋತ್ಸಾಹ ನೀಡುವುದರಿಂದ ಮಕ್ಕಳ ಪ್ರತಿಕ್ರಿಯೆಗಳನ್ನು ವಿಸ್ತರಿಸಲು ಸಹಾಯವಾಗುತ್ತದೆ. ಮೌಖಿಕ ಸಂಭಾಷಣೆಗಳ ಜೊತೆಗೆ, ಕೆಲವು ಮಕ್ಕಳು ಬರವಣಿಗೆಯನ್ನು ಬಳಸಿಕೊಂಡು ಪ್ರತಿಕ್ರಿಯಿಸಲು ಬಯಸಿದರೆ, ಇತರರು ಚಿತ್ರಿಸಿ ಪ್ರತಿಕ್ರಿಯಿಸಲು ಬಯಸಿದರು, ಮತ್ತೆ ಕೆಲವರು ಎರಡನ್ನೂ ಬಳಸಲು ಬಯಸಿದ್ದನ್ನು ನಾವು ಗಮನಿಸಿದ್ದೇವೆ. ಶ್ರೇಯಾ ಅವರಿಗೆ ಹೆಚ್ಚು ಕಾಲ ಕಲಿಸಲು ಸಾಧ್ಯವಾಗಿದ್ದರೆ, ಅವರು ಈ ಅಂಶವನ್ನು ಹೆಚ್ಚು ಸೂಕ್ಷ್ಮವಾಗಿ ಗಮನಿಸಬಹುದಾಗಿತ್ತು, ಸದ್ಯಕ್ಕೆ ಈ ಬಹು ವಿಧಾನಗಳನ್ನು ಬಳಸುವುದು ಪ್ರಯೋಜನಕಾರಿ ಎಂಬ ಸಂಕ್ಷಿಪ್ತ ಒಳನೋಟಗಳನ್ನು ಮಾತ್ರ ನಾವು ಹೊಂದಿದ್ದೇವೆ.



ಚಿತ್ರ 7. ರೇಖಾಚಿತ್ರದ ಮೂಲಕ ಥೇಲಾ ಗಾಡಿ ಎಂಬ ಕಥೆಯ ಅಂತಿಮ ಘಟ್ಟವನ್ನು ಚಿತ್ರಿಸುವ ಇನಾಯತ್‌ನ ಪ್ರತಿಕ್ರಿಯೆ.

ಚಿತ್ರಕೃಪೆ: ಶ್ರೇಯ ರಕ್ಷಿತ್.

ಉದಾಹರಣೆಗೆ, ಚಿತ್ರ 7 ರಲ್ಲಿ, ಮಗು ಕಥೆಯ ಅಂತಿಮ ಘಟ್ಟವು ನೂರುವಿನ ಬಂಡಿ ಮುರಿದ ಗಳಿಗೆ ಎಂದು ಚಿತ್ರಿಸಲು ಪ್ರಯತ್ನಿಸಿದೆ ಮತ್ತು ಇದು ಅವರಿಬ್ಬರ ನಡುವಿನ ಸಂಬಂಧದಲ್ಲಿ ಬಿರುಕು ಮೂಡಿದ ಗಳಿಗೆಯೂ ಆಗಿದೆ. ಇಲ್ಲಿ, ಮಗುವಿಗೆ ಕಥೆಯ ಸಾರವನ್ನು ಸರಳ ಚಿತ್ರದ ಮೂಲಕ ತಿಳಿಸಲು ಸಾಧ್ಯವಾಗಿದೆ , ಈ ಸಂದರ್ಭದಲ್ಲಿ, ಶಿಕ್ಷಕರು ಮಕ್ಕಳಿಗೆ ಕಥೆಯಲ್ಲಿ ಹೆಚ್ಚು ಸೆಳೆದ ಅಥವಾ ಪ್ರಚೋದಿಸಿದ ಅಂಶದ ಬಗ್ಗೆ ಬರೆಯಲು ಕೇಳಿದ್ದರು.

ಮತ್ತೊಂದು ಹಂತದಲ್ಲಿ, ಶಿಕ್ಷಕರು ಅದೇ ಕಥೆಗೆ ಪ್ರತಿಕ್ರಿಯೆಯಾಗಿ ಬರೆಯಲು ಕೇಳಿಕೊಂಡರು. ಅವರು "ನೀವು ಲೇಖಕರಾಗಿದ್ದರೆ, ಕಥೆಯನ್ನು ಹೇಗೆ ಕೊನೆಗೊಳಿಸುತ್ತೀರಿ?" ಎಂಬ ಪ್ರಶ್ನೆ ಕೇಳಿದ್ದರು. ಅದಕ್ಕೆ ಅಸಿಮ್ ಹೀಗೆ ಬರೆದಿದ್ದ:

> ನಾನು ಲೇಖಕನಾಗಿದ್ದರೆ, ತುನಿ, 10 ತಿಂಗಳ ನಂತರ ಹಿಂದಿರುಗಿದಾಗ, ನೂರು ನಾಯಿ ಕೆಮ್ಮಿನಿಂದ ಸಾವನ್ನಪ್ಪಿದ್ದು ಮತ್ತು ಅವನ ತಾಯಿ ಅತ್ತಿದ್ದು ಒಂದು ಕನಸಾಗಿತ್ತು ಎಂಬುದಾಗಿ ಬರೆಯುತ್ತಿದ್ದೆ. ತುನಿ ಕನಸಿನಿಂದ ಎಚ್ಚರಗೊಂಡು, ನೂರು ಕಡೆಗೆ ಓಡಿ ಅವನನ್ನು ತಬ್ಬಿಕೊಂಡು ಮತ್ತೆ ಸ್ನೇಹಿತನಾಗುತ್ತಿದ್ದ. (ಅಸಿಮ್, ಮಕ್ಕಳ ಬರವಣಿಗೆ, 21.11.2018.)

ಇಲ್ಲಿ, ಮಗುವಿಗೆ ತನ್ನ ಭಾವನೆಗಳನ್ನು ಮರುಪರಿಶೀಲಿಸಲು ಮತ್ತೊಂದು ಅವಕಾಶ ಸಿಗುತ್ತಿದೆ. (ಮೌಖಿಕ ಚರ್ಚೆಯ ನಂತರ ಮಕ್ಕಳು ನೂರು ಸಾವಿನ ಬಗ್ಗೆ ತಮ್ಮ ದುಃಖವನ್ನು ವ್ಯಕ್ತಪಡಿಸಿದರು) ಮತ್ತು ಸಂತೋಷದಾಯಕ ಅಂತ್ಯವನ್ನು ಸೃಷ್ಟಿಸಲು, ತನಗೆ ಹೆಚ್ಚು ತೃಪ್ತಿದಾಯಕವೆನಿಸುವಂತೆ ತಾನು ಪಠ್ಯವನ್ನು ಹೇಗೆ ಪುನಃ ರಚಿಸಿರುತ್ತಿದ್ದೆ ಎಂಬುದನ್ನು ವ್ಯಕ್ತಪಡಿಸುತ್ತಿದ್ದಾನೆ.

ಓದುಗರು ಕೆಲವೊಮ್ಮೆ ತಮ್ಮ ಜಗತ್ತಿನಿಂದ ತಪ್ಪಿಸಿಕೊಳ್ಳಲು ಅಥವಾ ತಮ್ಮ ಜಗತ್ತನ್ನು ನಿಯಂತ್ರಿಸಲು ಪಠ್ಯಗಳನ್ನು ಬಳಸುತ್ತಾರೆ. ಆದ್ದರಿಂದ, ಎಲ್ಲ ಪಠ್ಯವು ಸಂತೋಷದಾಯಕವಲ್ಲದ ಅಂತ್ಯ ಹೊಂದಿರುತ್ತದೆ ಎಂಬುದನ್ನು ತಿಳಿಸಿಕೊಡುವುದು ಶ್ರೇಯಾ ಅವರ ಆದ್ಯತೆಯಾಗಿರಲಿಲ್ಲ. ಸಂತೋಷದಾಯಕವಲ್ಲದ ಕಥೆಗಳನ್ನು ಮಕ್ಕಳು ಹೇಗೆ ಭಾವಿಸಿದರು ಎಂಬುನ್ನು ಗ್ರಹಿಸಲು ಒಂದು ವೇದಿಕೆಯನ್ನು ಒದಗಿಸುವುದು ಅವರ ಆದ್ಯತೆಯಾಗಿತ್ತು. ಕಾಲಾನಂತರದಲ್ಲಿ ಮತ್ತು ಸಂಕೀರ್ಣ ಪಠ್ಯಗಳಿಗೆ ಸಾವಕಾಶವಾಗಿ ತೆರೆದುಕೊಳ್ಳುವುದರಿಂದ, ಎಲ್ಲಾ ಪಠ್ಯಗಳು ಸುಖಾಂತ್ಯಗಳನ್ನು ಹೊಂದಿರುವುದಿಲ್ಲ ಮತ್ತು ಅವು ಜೀವನವನ್ನು ಪ್ರತಿಬಿಂಬಿಸುತ್ತವೆ ಎಂಬ ತಿಳುವಳಿಕೆಗೆ ಮಕ್ಕಳು ಬರುತ್ತಾರೆ.

**ಬರವಣಿಗೆಯ ಕಾರ್ಯಾಗಾರಗಳು ಗಟ್ಟಿಯಾಗಿ ಓದುವ ಚಟುವಟಿಕೆ ಅವಧಿಗಳಲ್ಲಿ ಮಕ್ಕಳ ತಿಳುವಳಿಕೆ ಬೆಳವಣಿಗೆಗೆ ಸಹಾಯ ಮಾಡುತ್ತವೆ.,** ಆರಂಭದಲ್ಲಿ, ಬರೆಯಲು ಕೇಳಿದಾಗ, ಮಕ್ಕಳ ಹೆಚ್ಚಿನ ಪ್ರತಿಕ್ರಿಯೆಗಳು ರಚನೆಯ ಕೊರತೆಯನ್ನು ಹೊಂದಿದ್ದವು ಮತ್ತು ಅವರು ಸಂವಹನ ಮಾಡಲು ಪ್ರಯತ್ನಿಸುತ್ತಿರುವ ಕೇಂದ್ರ ಕಲ್ಪನೆಯಿಂದ ದೂರ ಸರಿಯುತ್ತಿದ್ದರು ಎಂಬುದನ್ನು ಶ್ರೇಯಾ ಗಮನಿಸಿದರು. ಈ ಹಂತದಲ್ಲಿ, ಅವರು ಕೆಲಸ ಮಾಡಲು ಬಯಸಿದ ಮೂರು ಅಂಶಗಳನ್ನು (ವಿದ್ಯಾರ್ಥಿಗಳ ಅಗತ್ಯಗಳನ್ನು ಆಧರಿಸಿ) ಗುರುತಿಸಿದರು, ಅವರು ಹಲವು ಕಿರು-ಪಾಠಗಳ ಮೂಲಕ ಪರಿಚಯಿಸಲು ನಿರ್ಧರಿಸಿದರು.

ಮೊದಲನೆಯದಾಗಿ, ಒಂದು ಘಟನೆಯ ಪ್ರಾರಂಭ, ಮಧ್ಯ ಮತ್ತು ಅಂತ್ಯದ ಬಗ್ಗೆ ನಿರೂಪಣಾ ರಚನೆಯೊಂದಿಗೆ ಬರೆಯುವ ಚೌಕಟ್ಟನ್ನು ಪರಿಚಯಿಸಿದರು. ಅವರು ಪರಿಚಯಿಸಿದ ಎರಡನೆಯ ಅಂಶವೆಂದರೆ ವಿವರಗಳನ್ನು ಸೇರಿಸುವುದು ಮತ್ತು ಒಬ್ಬರ ಭಾವನೆಗಳನ್ನು ಅಥವಾ ಧ್ವನಿಯನ್ನು ಬರವಣಿಗೆಯ ರೂಪಕ್ಕೆ ತರುವುದು. ಕೊನೆಯದಾಗಿ, ಒಂದು ವಿಷಯದ ಬಗ್ಗೆ ಒಬ್ಬರ ಆಲೋಚನೆಯನ್ನು ಅಭಿವೃದ್ಧಿಪಡಿಸಲು ಮತ್ತು ಸಂಘಟಿಸಲು ಮನೋನಕ್ಷೆ (ಮೈಂಡ್ ಮ್ಯಾಪ್) ಬಳಸುವ ಕಲ್ಪನೆಯನ್ನು ಪರಿಚಯಿಸಿದರು. ತಾನು ಸಂವಹನ ಮಾಡಲು ಪ್ರಯತ್ನಿಸುತ್ತಿರುವ ವಿಚಾರಗಳನ್ನು

,
ಮಕ್ಕಳು ಅರ್ಥಮಾಡಿಕೊಂಡಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು, ಶ್ರೇಯಾ ಅವರು ತಾವು ಈ ಹಿಂದೆ ಗಟ್ಟಿಯಾಗಿ ಓದಿದ್ದ ಪಠ್ಯಗಳನ್ನು ಸೂಚಿಸುತ್ತ ತಮ್ಮ ಬರವಣಿಗೆಯ ಮೂಲಕ ಮಾದರಿಯನ್ನು (ಮಾಡಲಿಂಗ್) ತೋರಿಸಿಕೊಟ್ಟರು. ಮಾಡೆಲಿಂಗ್‌ನ ಕೆಲವು ಸೆಷನ್‌ಗಳ ನಂತರ, ಪಠ್ಯಗಳಿಗೆ ಅವರ ಲಿಖಿತ ಪ್ರತಿಕ್ರಿಯೆಗಳಲ್ಲಿ ಈ ಅಂಶಗಳನ್ನು ಸೇರಿಸಲು ಮಕ್ಕಳನ್ನು ಪ್ರೋತ್ಸಾಹಿಸಿದರು ಮತ್ತು ಪರಸ್ಪರ ಪ್ರತಿಕ್ರಿಯೆಯನ್ನು ನೀಡಲು ಅವರಿಗೆ ಅವಕಾಶಗಳನ್ನು ಒದಗಿಸಿದರು.

ಪ್ರತಿ ಮಗುವಿನ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೇಗೆ ರೂಪಿಸಲಾಗುತ್ತಿದೆ ಎಂಬುದನ್ನು ತೋರಿಸಲು ನಾವು ಎರಡು ಮಾದರಿ ಪ್ರತಿಕ್ರಿಯೆಗಳನ್ನು ನೋಡೋಣ. ಅವರು 'ಗ್ರಿಶ್ಯರ್ ಡುಪುರ್' (ಬೇಸಿಗೆ ಮಧ್ಯಾಹ್ನ, 'ಆಮ್ ಆಂಟಿ-ಆರ್ ಭೆಪು', ಬಿಭೂತಿಭೂಷಣ್ ಬಂದೋಪಾಧ್ಯಾಯ, 2018, ಸಿಗ್ನೆಟ್ ಪ್ರೆಸ್) ಕಾದಂಬರಿಯಿಂದ ಒಂದು ಅಧ್ಯಾಯಕ್ಕೆ ಪ್ರತಿಕ್ರಿಯಿಸುತ್ತಿದ್ದರು. ಈ ಪುಸ್ತಕವನ್ನು ಓದಿದ ಮತ್ತು ಚರ್ಚಿಸಿದ ನಂತರ, "ನಿಮ್ಮ ಬೇಸಿಗೆಯ ಮಧ್ಯಾಹ್ನಗಳನ್ನು ನೀವು ಹೇಗೆ ಕಳೆಯುತ್ತೀರಿ?" ಎಂಬ ಪ್ರಶ್ನೆಯ ಕುರಿತು ಪಠ್ಯದಿಂದ ಸ್ವಯಂ ಸಂಪರ್ಕಗಳನ್ನು ಪ್ರಚೋದಿಸುವ ವಿವರಣೆ ಬರೆಯಲು ಮಕ್ಕಳಿಗೆ ಸೂಚಿಸಯಿತು -

ಇಲ್ಲಿ ಪ್ರಸ್ತುತಪಡಿಸುತ್ತಿರುವ ಮೊದಲ ಪ್ರತಿಕ್ರಿಯೆ ಮಗುವು ಒಂದು ಪಠ್ಯಕ್ಕೆ ಒಂದು ರೂಪವನ್ನು ನೀಡಲು ಪ್ರಯತ್ನಿಸುವುದಾಗಿದೆ. ಈ ಘಟನೆಯನ್ನು ಶ್ರೇಯಾ ತೋರಿಸಿಕೊಟ್ಟಿದ್ದ ಮಾದರಿಯನ್ನು ಅನುಸರಿಸುವ ಪ್ರಯತ್ನದಲ್ಲಿ ಸಿ ಮಗುವು ಭಾವನೆಗಳನ್ನು ಮತ್ತು ವಿವರಣೆಯನ್ನು ಸೇರಿಸಿತು. ಬೇಸಿಗೆಯ ಮಧ್ಯಾಹ್ನದೊಂದಿಗೆ ಮಗು ಸಂಯೋಜಿಸುವ ಸಾಮಾನ್ಯ ವಿಚಾರಗಳನ್ನು ಗುರುತಿಸುವ ಹಂತವನ್ನು ಮೀರಿ ಮಗು ಸಾಗಿದೆ ಮತ್ತು ಮನೋನಕ್ಷೆಯ ಅಭ್ಯಾಸದ ಮೂಲಕ ಮಗು ಪಟ್ಟಿ ಮಾಡಿದ ಅನೇಕ ವಿಚಾರಗಳಲ್ಲಿ ಒಂದನ್ನು ವಿವರಿಸಿದೆ.

,

ಎರಡನೆಯ ಪ್ರತಿಕ್ರಿಯೆ ಅಸೀಮಾಳದ್ದು. ಒಬ್ಬ ಬರಹಗಾರ್ತಿಯಾಗಿ ಅವಳು ಅಸೀಮ್‌ನಷ್ಟು ಆತ್ಮವಿಶ್ವಾಸ ಉಳ್ಳವಳಾಗಿರಲಿಲ್ಲ. ಆದಾಗ್ಯೂ ಅವಳು ತನ್ನ ಬರವಣಿಗೆಯ ಮೂಲಕ ಆಲೋಚನೆ ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಕಲಿಯುತ್ತಿದ್ದಾಳೆ. ಮೈಂಡ್-ಮ್ಯಾಪಿಂಗ್ ಚಟುವಟಿಕೆಯು ಈ ಪ್ರಯತ್ನದಲ್ಲಿ ಅವಳಿಗೆ ಸಹಾಯವಾಯಿತು, ಮತ್ತು ಬೇಸಿಗೆಯ ಮಧ್ಯಾಹ್ನದೊಂದಿಗೆ ಅವಳು ಸಂಯೋಜಿಸಿದ ಕೆಲವು ವಿಚಾರಗಳನ್ನು ಅವಳು ಬರೆದಳು. ಬೇಸಿಗೆಯ ಮಧ್ಯಾಹ್ನದ ಸಂಪೂರ್ಣ ಚಿತ್ರಣವನ್ನು ಓದುಗರಿಗೆ ನೀಡಲು ಅವಳ ಆಲೋಚನೆಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸುವ ಅಗತ್ಯವಿತ್ತು, ಆದರೆ ಒಂದು ವಿಷಯದ ಸುತ್ತ ಅವಳ ಆಲೋಚನೆಗಳನ್ನು ಸಂಘಟಿಸುವ ಪ್ರಯತ್ನ ಒಂದು ಹೆಜ್ಜೆ ಮುಂದಿದೆ. ಬರೆದ ನಂತರ, ಅವಳು ತನ್ನ ಬರವಣಿಗೆಯನ್ನು ಗುಂಪಿನೊಂದಿಗೆ ಹಂಚಿಕೊಂಡಳು, ಮತ್ತು ಗೆಳೆಯರು ಅದರ ಬಗ್ಗೆ ಪ್ರತಿಕ್ರಿಯೆಯನ್ನು ನೀಡಿದರು - ಹೀಗೆ

, 19
ಬರವಣಿಗೆಯನ್ನು ಹೇಗೆ ಉತ್ತಮಗೊಳಿಸಬಹುದು ಎಂಬುದರ ಕುರಿತಾದ ಸಾಮೂಹಿಕ ತಿಳುವಳಿಕೆ ಹೆಚ್ಚಿತು. .

ಬೇಸಿಗೆಯಲ್ಲಿ ಶಾಲೆ ರಜೆಗಾಗಿ ಮುಚ್ಚಿದಾಗ, ನನಗೆ ತುಂಬಾ ಸಂತೋಷವಾಗುತ್ತದೆ. ಸುಡುವ ಮಧ್ಯಾಹ್ನದ ಬಿಸಿಲಿನಲ್ಲಿ , ನಾನು ಹೊರಗೆ ಹೋಗಿ ಆಟವಾಡಬೇಕು ಎಂದು ಅನಿಸುವುದಿಲ್ಲ, ಅದಕ್ಕಾಗಿಯೇ ನಾನು ಮನೆಯಲ್ಲಿ ಮಲಗುತ್ತೇನೆ. ಬೇಸಿಗೆಯಲ್ಲಿ, ನಾನು ತಣ್ಣೀರಿನಲ್ಲಿ ಸ್ನಾನ ಮಾಡಲು ಇಷ್ಟಪಡುತ್ತೇನೆ. ಬೇಸಿಗೆಯಲ್ಲಿ, ಮೋಡಗಳು ದೂರ ಚೆದುರುತ್ತವೆ ಮತ್ತು ಸೂರ್ಯನು ಪ್ರಜ್ವಲಿಸುತ್ತಾನೆ, ಆದ್ದರಿಂದ ನಾನು ನನ್ನ ಮನೆಯ ಹೊರ ಅಂಗಳಕ್ಕೆ (ಖಮರ್) ಹೋಗುತ್ತಿರಲಿಲ್ಲ ಮತ್ತು ನಾನು ಮನೆಯೊಳಗೆ ಆಟವಾಡುತ್ತಿದ್ದೆ. ನಾನು ಸಂಜೆ *4* ಗಂಟೆಗೆ ಹೊರಗಡೆ (ಖಮರ್) ಹೋಗುತ್ತಿದ್ದೆ

ನಾನು ನಮ್ಮ ಖಮರ್‌ನಲ್ಲಿ ರಿಕ್ಷಾದಲ್ಲಿ ಆಡುತ್ತಿದ್ದೆ. ಸಂಜೆ, ಸೂರ್ಯ ಮುಳುಗುತ್ತಿದ್ದ (ಭೇಶೆ ಗ್ಯಾಲೊ). ಆಗ ನಾನು ಚಂದ್ರ ಕಾಣಿಸಿಕೊಳ್ಳುವುದನ್ನು ನೋಡಿದೆ. ಬೇಸಿಗೆಯಲ್ಲಿ, ಭಾರೀ ಚಂಡಮಾರುತ ಸಂಭವಿಸುತ್ತದೆ ನಂತರ ನಾನು ಮತ್ತು ತಬಸ್ಸುಮ್ ಮಾವಿನಹಣ್ಣುಗಳನ್ನು ಸಂಗ್ರಹಿಸಲು ತೋಟಕ್ಕೆ ಹೋಗುತ್ತಿದ್ದೆವು. ಬೇಸಿಗೆಯಲ್ಲಿ, ಕೆಲವೊಮ್ಮೆ ನಿಮಗೆ ಗುಡುಗಿನ ಸದ್ದು ಕೇಳಿಸಬಹುದು, ಮತ್ತು ಭಾರೀ ಚಂಡಮಾರುತ ಸಂಭವಿಸುತ್ತದೆ ಮತ್ತು ಮರಗಳು ಎಲ್ಲಾ ತೂಗಾಡುತ್ತವೆ, ನಂತರ ಮರಗಳ ಕೊಂಬೆಗಳು ಮುರಿಯುತ್ತವೆ. (ಬರವಣಿಗೆ ಇದ್ದಕ್ಕಿದ್ದಂತೆ ಕೊನೆಗೊಳ್ಳುತ್ತದೆ.) (ಅಸಿಮಾ, ಮಕ್ಕಳ ಬರವಣಿಗೆ, 3.12.18)

ಶ್ರೇಯಾ: ಸರಿ! ಈಗ ನಾವು ಅಸಿಮಾಳಬರವಣಿಗೆಯ ಬಗ್ಗೆ ಏನು ಯೋಚಿಸಿದ್ದೇವೆ ಎಂಬುದರ ಬಗ್ಗೆ ಪ್ರತಿಕ್ರಿಯೆ ನೀಡುತ್ತೇವೆ. ನಮಗೆ ಏನು ಇಷ್ಟವಾಯಿತೋ ಅದನ್ನು ನಾವು ಅವಳಿಗೆ ಹೇಳುತ್ತೇವೆ. ಅವಳ ಬರವಣಿಗೆಗೆ ಆರಂಭ, ಮಧ ಮತ್ತು ಅಂತ್ಯವಿದೆಯೇ ಎಂದು ನಾವು ನೋಡೋಣ. ಅವಳ ಬರವಣಿಗೆಯನ್ನು ಉತ್ತಮಗೊಳಿಸಲು ನಾವು ಅವಳಿಗೆ ಕೆಲವು ಸಲಹೆಗಳನ್ನು ನೀಡುತ್ತೇವೆ. ಸರಿನಾ?

ಹಾರೂನ್: ಅಂತ್ಯವು ಉತ್ತಮವಾಗಿರಬಹುದು.
(ಮೂರು-ನಾಲ್ಕು ಇತರ ಧ್ವನಿಗಳು ಈ ಮಾತಿಗೆ ಒಪ್ಪಿಗೆ ವ್ಯಕ್ತಪಡಿಸುತ್ತವೆ)

ಶ್ರೇಯಾ: ಸರಿ, ಅಂತ್ಯದ ಬಗ್ಗೆ ಏನು? ನನಗೆ ಇನ್ನಷ್ಟು ಹೇಳು.
ಹಾರೌನ್: ಕೊಂಬೆ ಮುರಿದು ಅವಳು ಮನೆಗೆ ಹೋಗುತ್ತಾಳೆ. ಬರವಣಿಗೆ ಕೊನೆಗೊಂಡಂತೆ ಕಾಣಲಿಲ್ಲ. ಅದು ಹಠಾತ್ತಾಗಿ ಮುಕ್ತಾಯವಾಗಿತ್ತು.
ಮಕ್ಕಳು ಸರ್ವಾನುಮತದಿಂದ ಹೌದು ಎಂದು ಹೇಳುತ್ತಾರೆ.)

ಶ್ರೇಯಾ: ಮರದ ಕೊಂಬೆ ಮುರಿದುಹೋಯಿತು, ಆದರೆ ನಂತರ ಏನಾಯಿತು ಎಂದು ನಮಗೆ ತಿಳಿದಿಲ್ಲ.

ಅವಳ ಬರವಣಿಗೆಯಲ್ಲಿ ನಿಮಗೆ ಏನು ಇಷ್ಟವಾಯಿತು? (ವಿರಾಮ) ನೀವೆಲ್ಲರೂ ಅವಳ ಕತೆಯನ್ನು ಕೇಳಿದ್ದೀರಿ. ಅವಳ ಬರವಣಿಗೆಯಲ್ಲಿ ನೀವು ಇಷ್ಟಪಟ್ಟ ಕೆಲವು ಸಂಗತಿಗಳಿವೆ ಎಂದು ನನಗೆ ಅನಿಸುತ್ತದೆ . ನನಗಂತು ಅನ್ನಿಸಿದೆ.

ಪ್ರದೀಪ್: ಕಲ್ಬೈಶಾಖಿ (ವಾಯವ್ಯ ), ವಾಯವ್ಯ ಬಗ್ಗೆ ಉಲ್ಲೇಖ ಮತ್ತು ಅದರ ವಿವರಣೆ ನನಗೆ ಹಿಡಿಸಿತು.

(ತರಗತಿ ಚರ್ಚೆ, 3.12.18)

ಈ ಎರಡು ಉದಾಹರಣೆಗಳಲ್ಲಿ ನಾವು ಗಮನಿಸುವುದೇನೆಂದರೆ, ಬೇಸಿಗೆಯ ಮಧ್ಯಾಹ್ನದ ಅನುಭವವು ಎಲ್ಲಾ ಮಕ್ಕಳಿಗೆ ಪರಿಚಿತವಾಗಿದ್ದರೂ, ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಅನುಭವಗಳ ಆಧಾರದ ಮೇಲೆ ಅದರ ವಿಭಿನ್ನ ಅಂಶವನ್ನು ಹೊರತಂದರು. ಮಕ್ಕಳ ಬರವಣಿಗೆಯನ್ನು ಬಲಪಡಿಸುವಲ್ಲಿ ಶಿಕ್ಷಕರ ಮಾಡೆಲಿಂಗ್ ಮತ್ತು ಆಪ್ತರ ಪ್ರತಿಕ್ರಿಯೆ ಚಟುವಟಿಕೆಗಳು ಮುಖ್ಯವಾಗಿತ್ತು, ಅದು ಅವರಿಗೆ ಗಟ್ಟಿಯಾಗಿ ಓದಿದ ಪಠ್ಯಗಳ ಬಗೆಗಿನ ಅವರ ತಿಳುವಳಿಕೆಯನ್ನು ಬಲಪಡಿಸಿತು. ಓದುವುದು, ಬರೆಯುವುದು, ಮಾತನಾಡುವುದು, ಕೇಳುವುದು ಮತ್ತು ಯೋಚಿಸುವುದು ಇವೇ ಮುಂತಾದ ಚಟುವಟಿಕೆಗಳಿಗೆ ಏಕಕಾಲದಲ್ಲಿ ಸಹಾಯ ಮಾಡಲಾಯಿತು, ಜೊತೆಗೆ ಸ್ವಲ್ಪ ಮಟ್ಟಿಗೆ ಚಿತ್ರರಚನೆಗೂ ಸಹಾಯ ಮಾಡಲಾಯಿತು.

**ಸಾರಾಂಶ**

ಶ್ರೇಯಾ ಹಲವಾರು ವಿಧಗಳಲ್ಲಿ ಅದೃಷ್ಟಶಾಲಿಯಾಗಿದ್ದರು. ಮೊದಲಿಗೆ, ಅವರು ಮಕ್ಕಳ ಸಾಹಿತ್ಯ ಸಮೃದ್ಧವಾಗಿರುವ ಬಂಗಾಳಿ ಭಾಷೆಯಲ್ಲಿ ಕೆಲಸ ಮಾಡಿದರು. ಎರಡನೆಯದಾಗಿ, ಅವರು ಕೆಲಸ ಮಾಡಿದ ಸ್ಥಳ ಈ ಟಿಪ್ಪಣಿಯಲ್ಲಿ ವಿವರಿಸಿರುವ ಸಂಕೀರ್ಣ ರೂಪದ ಸಾಹಿತ್ಯವನ್ನು ಬಳಸುತ್ತಿರಲಿಲ್ಲವಾದರೂ ತರಗತಿಯಲ್ಲಿ ಸಾಹಿತ್ಯದ ಬಳಕೆಗೆ ಮಹತ್ವ ನೀಡುವ ಎನ್‌ಜಿಓಗೆ ಸಂಬಂಧಿಸಿದ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಮಕ್ಕಳು ಮೂಲಭೂತವಾಗಿ ಓದುವ ಮತ್ತು ಬರವಣಿಗೆಯೊಂದಿಗೆ ಆರಾಮದಾಯಕವಾಗಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರು, ಶ್ರೇಯಾ ಅವರಿಗೆ ಪ್ರಯೋಗಕ್ಕೆ ಅವಕಾಶ ನೀಡಲಾಯಿತು, ಜೊತೆಗೆ ಅವರು ಬಳಸಬಹುದಾದ ಪಠ್ಯಗಳ ಬಗ್ಗೆ ಸಹಾಯ ಮತ್ತು ಪ್ರತಿಕ್ರಿಯೆಯನ್ನು ನೀಡಲಾಯಿತು.

ಮೂರನೆಯದಾಗಿ, ಅಜೀಮ್ ಪ್ರೇಮ್ಜಿ ವಿಶ್ವವಿದ್ಯಾನಿಲಯಕ್ಕೆ ತನ್ನ ಸ್ನಾತಕೋತ್ತರ ಶಿಕ್ಷಣಕ್ಕಾಗಿ ಆಗಮಿಸುವ ಮುನ್ನ ಶಿಕ್ಷಕಿಯಾಗಿದ್ದ ಅವರು ಮಕ್ಕಳಿಗೆ ಕಲಿಸಲು ಸುಸಜ್ಜಿತಳಾಗಿದ್ದರು, ಅಲ್ಲಿ ಅವರು ತರಗತಿಯಲ್ಲಿ ಸಾಹಿತ್ಯದ ಬಳಕೆಯ ಬಗ್ಗೆ ಹೆಚ್ಚುವರಿ ಸೈದ್ಧಾಂತಿಕ ಜ್ಞಾನವನ್ನು ಸಹ ಪಡೆದರು. ಅವರು ಪ್ರಾದೇಶಿಕ ಭಾಷೆ ಬಂಗಾಳಿ ತಿಳಿದಿದ್ದರು ಮತ್ತು ಅದರಲ್ಲಿ ಮಕ್ಕಳಿಗೆ ಆರಾಮವಾಗಿ ಮಾರ್ಗದರ್ಶನ ನೀಡಬಲ್ಲವಳಾಗಿದ್ದಳು. ಅವರು ಮಕ್ಕಳೊಂದಿಗೆ ಅತಿಕಡಿಮೆ ಸಮಯವನ್ನು ಕಳೆಯಬಹುದು ಎಂಬುದು ಒಂದು ದೊಡ್ಡ ಮಿತಿಯಾಗಿತ್ತು. ಹಾಗಿದ್ದರೂ, ಅವರು ಹೆಚ್ಚು ಸಾಧಿಸಲು ಸಾಧ್ಯವಾಯಿತು, ಮಕ್ಕಳು ತಾವು ಓದುವ ಮತ್ತು ಬರೆಯುತ್ತಿರುವ ಪಠ್ಯಗಳ ನಡುವೆ ನಿಜವಾದ ಸಂಪರ್ಕವನ್ನು ಉಂಟುಮಾಡಬಹುದು ಎಂದು ತಿಳಿದಿತ್ತು. ಮಕ್ಕಳಿಗೆ ಸರಳ ಅಥವಾ ಸರಳೀಕೃತ ಪಠ್ಯಗಳ ಅಗತ್ಯವಿಲ್ಲ ಎಂಬುದು ಅವಳಿಗೆ ಬಹಳ ದೊಡ್ಡ ಕಲಿಕೆಯಾಗಿತ್ತು. ಸಾಕಷ್ಟು ಸಹಾಯ ಮತ್ತು ಮಧ್ಯಸ್ಥಿಕೆಯೊಂದಿಗೆ, ಮಕ್ಕಳು ಸಂಕೀರ್ಣ ಆಲೋಚನೆಗಳು ಮತ್ತು ಭಾವನೆಗಳನ್ನು ಪರಿಭಾವಿಸಬಹುದು ಮತ್ತು ಆಳವಾದ ಮತ್ತು ಅರ್ಥಪೂರ್ಣವಾದ ಪ್ರತಿಕ್ರಿಯಿಸುವ ವಿಧಾನಗಳನ್ನು ಕಲಿಯಬಹುದು.

ಈಗ, ಶ್ರೇಷ್ಠ ಪಠ್ಯಗಳನ್ನು ತೆಗೆದುಕೊಳ್ಳಲು ಮತ್ತು ಅವುಗಳನ್ನು ನಿಮ್ಮ ತರಗತಿ ಕೋಣೆಗಳಲ್ಲಿ ಅರ್ಥಪೂರ್ಣವಾಗಿ ಮತ್ತು ಸಂಕೀರ್ಣವಾದ ರೀತಿಯಲ್ಲಿ ಬಳಸಲು ನೀವು ಸಹ ಪ್ರೇರೇಪಣೆ ಪಡೆದಿದ್ದೀರಿ ಎಂದು ನಾವು ಭಾವಿಸುತ್ತೇವೆ!

**ಬೋಧನೆಯಲ್ಲಿ ಬಳಸಲಾದ ಮಕ್ಕಳ ಸಾಹಿತ್ಯ**

ಬಂದೋಪಾಧ್ಯಾಯ, ಬಿ. (1995). ಶ್ರೇಷ್ಠೋ ಕಿಶೋರ್ ಓಮ್ನಿಬಸ್ (21 ನೇ ಆವೃತ್ತಿ). ಕೋಲ್ಕತಾ: ಕಾಮಿನಿ ಪ್ರಕಾಶನ .

ಬಂದೋಪಾಧ್ಯಾಯ, ಬಿ. (2018). ಆಮ್ ಆಂಟಿ-ಆರ್ ಭೆಪು. ಕೋಲ್ಕತಾ: ಸಿಗ್ನೆಟ್ ಪ್ರೆಸ್. ಮಜುಂದರ್, ಎಲ್. (2018). ಕಾಗ್ ನೋಯಿ. ಕೋಲ್ಕತಾ: ಆನಂದ ಪ್ರಕಾಶಕರು.

ಮಜುಂದರ್, ಎಲ್. (2018). ದಿನ್ ಡುಪುರೆ. ಕೋಲ್ಕತಾ: ಸಿಗ್ನೆಟ್ ಪ್ರೆಸ್.

ರೇ, ಎಸ್. (ಎನ್.ಡಿ.). ಸುಕುಮಾರ್ ರೇ ಎರ್ ಶ್ರೆಷ್ಟೋ ಮೊಜರ್ ಗಾಲ್ಪೊ. (ಎಲ್. ಮಜುಂದರ್, ಸಂ.) ಕೋಲ್ಕತಾ.